ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 16.08.2022 ರಂದು ಅಪರಾಹ್ನ 12.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳ ಗೃಹ ಕಛೇರಿ "ಕೃಷ್ಣಾ" ಇಲ್ಲಿ ಜರುಗಿದ ನೆಫ್ರೋ-ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು :

<u>ಸಭೆಯಲ್ಲಿ ಹಾಜರಿದ್ದ ಸದಸ್ಯರು :</u>

1. ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ — ಅಧ್ಯಕ್ಷರು
   ಮಾನ್ಯ ಮುಖ್ಯಮಂತ್ರಿಗಳು,
   ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು,
   ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ
   ಬೆಂಗಳೂರು.

2. ಸನ್ಮಾನ್ಯ ಡಾ॥ ಕೆ. ಸುಧಾಕರ್, — ಉಪಾಧ್ಯಕ್ಷರು
   ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು
   ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು,
   ಆಡಳಿತ ಮಂಡಳಿ, ನೆಫ್ರೋ-ಯುರಾಲಜಿ ಸಂಸ್ಥೆ
   ಬೆಂಗಳೂರು.

3. ಶ್ರೀ. ನವೀನ್ ರಾಜ್ ಸಿಂಗ್, ಭಾ.ಆ.ಸೇ., — ಸದಸ್ಯರು
   ಸರ್ಕಾರದ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
   (ವೈದ್ಯಕೀಯ ಶಿಕ್ಷಣ) ಬಹುಮಹಡಿಗಳ ಕಟ್ಟಡ,
   ಬೆಂಗಳೂರು.

4. ಶ್ರೀ ಕೃಷ್ಣ ಎನ್ ಬುಗಟ್ಯಾಗೋಳ — ಸದಸ್ಯರು
   ವಿಶೇಷಾಧಿಕಾರಿಗಳು ಮತ್ತು
   ಕಾರ್ಯನಿಮಿತ್ತ ಜಂಟಿ ಕಾರ್ಯದರ್ಶಿಗಳು,
   (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಪರವಾಗಿ)
   ಆರ್ಥಿಕ ಇಲಾಖೆ, ವಿಧಾನಸೌಧ,
   ಬೆಂಗಳೂರು — 560 001.

5. ಡಾ|| ಸುಜಾತ ರಾಥೋಡ್ — ಸದಸ್ಯರು
ನಿರ್ದೇಶಕರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು.

6. ಡಾ|| ಇಂದುಮತಿ. — ಸದಸ್ಯರು
ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಆರೋಗ್ಯ ಸೌಧ, ಬೆಂಗಳೂರು.

7. ಡಾ|| ಜಿ.ಕೆ. ವೆಂಕಟೇಶ್, — ಅಧಿಕಾರೇತರ ಸದಸ್ಯರು
ಯುರಾಲಜಿಸ್ಟ್ ಹಾಗೂ ನಿರ್ದೇಶಕರು (ನಿವೃತ್ತ),
ನೆಫ್ರೋ–ಯುರಾಲಜಿ ಸಂಸ್ಥೆ
ಬೆಂಗಳೂರು.

8. ಡಾ|| ನಾಗಭೂಷಣ್.ಎಂ. — ಸದಸ್ಯ ಕಾರ್ಯದರ್ಶಿಗಳು
ಪ್ರಾಧ್ಯಾಪಕರು, ಯುರಾಲಜಿ ವಿಭಾಗ
ಹಾಗೂ ನಿರ್ದೇಶಕರು (ಪ್ರ),
ನೆಫ್ರೋ–ಯುರಾಲಜಿ ಸಂಸ್ಥೆ,
ಬೆಂಗಳೂರು.

---

ನೆಫ್ರೋ–ಯುರಾಲಜಿ ಸಂಸ್ಥೆಯ ಪ್ರಭಾರ ನಿರ್ದೇಶಕರು ಹಾಗೂ ಆಡಳಿತ ಮಂಡಳಿ ಸಭೆಯ ಸದಸ್ಯ ಕಾರ್ಯದರ್ಶಿಗಳಾದ ಡಾ|| ನಾಗಭೂಷಣ್.ಎಂ. ಇವರು ಸಭೆಯಲ್ಲಿ ಹಾಜರಿದ್ದ ನೆಫ್ರೋ–ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ. ಬಸವರಾಜ ಎಸ್ ಬೊಮ್ಮಾಯಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಸನ್ಮಾನ್ಯ ಡಾ|| ಕೆ. ಸುಧಾಕರ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು, ಆಡಳಿತ ಮಂಡಳಿ, ನೆಫ್ರೋ–ಯುರಾಲಜಿ ಸಂಸ್ಥೆ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರುಗಳನ್ನು ಗೌರವಪೂರ್ವಕವಾಗಿ ಸಭೆಗೆ ಸ್ವಾಗತಿಸಿ, ಸನ್ಮಾನ್ಯ ಅಧ್ಯಕ್ಷರು ಸಭೆಯನ್ನು ಜರುಗಿಸಿಕೊಡುವಂತೆ ಕೋರಿದರು.

ತದನಂತರ, ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ, ಸಂಸ್ಥೆಯ ಕಾರ್ಯವೈಖರಿಯ ವಾರ್ಷಿಕ ವರದಿಯ ಬಗ್ಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಕಿರುಪರಿಚಯ ನೀಡಿದರು.

---

**ವಿಷಯ (1) :** **ದಿನಾಂಕ 24.01.2022 ರಂದು ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.**

ಸಂಸ್ಥೆಯ ನಿರ್ದೇಶಕರು ದಿನಾಂಕ: 24.01.2022 ರಂದು ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರ ಅಧ್ಯಕತೆಯಲ್ಲಿ ಜರುಗಿದ ಆಡಳಿತ ಮಂಡಳಿ ಸಭೆಯ ನಡವಳಿಯನ್ನು ಸ್ಥಿರೀಕರಿಸಲು ಹಾಗೂ ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಿ ನಡವಳಿಯಲ್ಲಿನ ಅಂಶಗಳಿಗೆ ಅನುಮೋದನೆ ಕೋರಲಾಗಿ, ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**<u>ವಿಷಯ (2) :</u>** **ದಿನಾಂಕ: 20.07.2021 ರಂದು ಅಪರಾಹ್ನ 4.30 ಗಂಟೆಗೆ Online Meeting ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಮೇಲಿನ ಅನುಪಾಲನಾ ವರದಿಯನ್ನು ಆರ್ಥಿಕ ಸಮತಿಯ ಶಿಫಾರಸ್ಸಿನಂತೆ ಆಡಳಿತ ಮಂಡಳಿಯ ಅನುಮೋದನೆಗೆ ಸಲ್ಲಿಸಿದೆ.**

| ಕ್ರ. ಸಂ. | ವಿಷಯ | ನಿರ್ಣಯ | ನಿರ್ಣಯದ ಮೇಲಿನ ಅನುಪಾಲನಾ ವರದಿ |
|---|---|---|---|
| 01 | ದಿನಾಂಕ : 07.10.2020 ರಂದು ಜರುಗಿದ ನೆಫ್ರೋ–ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅದರ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಪರಿಶೀಲಿಸಿ ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡುವ ಬಗ್ಗೆ. | ಸಮಿತಿಯು ವಿವರವಾಗಿ ಚರ್ಚಿಸಿ, ಹಿಂದಿನ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಲು ನಿರ್ಣಯ ಕೈಗೊಂಡಿತು. | ದಿನಾಂಕ : 24.01.2022ರಂದು ಜರುಗಿದ ಆಡಳಿತ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ. |

| | | | |
|---|---|---|---|
| 02 | ನೆಫ್ರೋ–ಯುರಾಲಜಿ ಸಂಸ್ಥೆಯ 2021–22ನೇ ಸಾಲಿನ ಆಯವ್ಯಯವನ್ನು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡುವ ಬಗ್ಗೆ. | ಸಮಿತಿಯು 2021–22 ನೇ ಸಾಲಿನ ಸಂಸ್ಥೆಯ ಆಯವ್ಯಯದ ಬಗ್ಗೆ ವಿವರವಾಗಿ ಚರ್ಚಿಸಿ, 2021–2022 ನೇ ಸಾಲಿನ ರಾಜಸ್ವ ಲೆಕ್ಕ ಶೀರ್ಷಿಕೆಯಲ್ಲಿ ಜಮೆ ಮೊತ್ತ ರೂ.5282 ಲಕ್ಷ ರೂ.ಗಳ ಸವಿವರ ವೆಚ್ಚದ ಅಂದಾಜುಗಳನ್ನು ಪರಿಗಣಿಸಿ ಆಡಳಿತ ಮಂಡಳಿ ಅನುಮೋದನೆಗೆ ಶಿಫಾರಸ್ಸು ನೀಡಲು ನಿರ್ಣಯ ಕೈಗೊಂಡಿತು. | 2021–22 ನೇ ಸಾಲಿನ ಸಂಸ್ಥೆಯ ಆಯವ್ಯಯದ ಅನುಮೋದನೆಗೆ ಆರ್ಥಿಕ ಸಮಿತಿಯ ಶಿಫಾರಸ್ಸನ್ನು ದಿನಾಂಕ : 24.01.2022 ರಂದು ಜರುಗಿದ ಆಡಳಿತ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ. |
| 03 | ಸಂಸ್ಥೆಯ 2020–2021 ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪಟ್ಟಿಯನ್ನು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡುವ ಬಗ್ಗೆ. | ನೆಫ್ರೋ–ಯುರಾಲಜಿ ಸಂಸ್ಥೆಯ 2020–21 ನೇ ಸಾಲಿನ ಲೆಕ್ಕಪತ್ರಗಳನ್ನು ಪರಿಶೋಧಿಸಿ ನೀಡಿರುವ ಲೆಕ್ಕ ಪರಿಶೋಧನಾ ವರದಿ ಹಾಗೂ ಲೆಕ್ಕಪತ್ರಗಳ ಪಟ್ಟಿಗಳನ್ನು ಆಡಳಿತ ಮಂಡಳಿಯು ಪರಿಗಣಿಸಿ ಆರ್ಥಿಕ ಸಮಿತಿಯ ಶಿಫಾರಸ್ಸಿನ ರೀತ್ಯ ಚಾರ್ಟಡ್ ಅಕೌಂಟೆಂಟ್‌ಗಳು ನೀಡಿರುವ ಸಂಸ್ಥೆಯ 2020–21 ನೇ ಲೆಕ್ಕ ಪರಿಶೋಧನಾ ವರದಿ ಹಾಗೂ ಲೆಕ್ಕ ಪತ್ರ ಪಟ್ಟಿಗಳನ್ನು ಪರಿಗಣಿಸಿ ಅನುಮೋದನೆ ನೀಡಲು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಲು ನಿರ್ಣಯ ಕೈಗೊಳ್ಳಲಾಯಿತು. | ಆರ್ಥಿಕ ಸಮಿತಿಯ ಶಿಫಾರಸ್ಸಿನ ರೀತ್ಯಾ, ದಿನಾಂಕ:24.01.2022 ರಂದು ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಲೆಕ್ಕ ಪತ್ರ ಪಟ್ಟಿಗಳಿಗೆ ಅನುಮೋದನೆ ನೀಡಲಾಯಿತು. ಸದರಿ ಲೆಕ್ಕಪತ್ರಗಳನ್ನು ದಿನಾಂಕ : 11.03.2022 ರಂದು ಜಿಲ್ಲಾ ನೊಂದಣಾಧಿಕಾರಿಗಳು ಎರಡನೇ ವಲಯ ಮಲ್ಲೇಶ್ವರಮ್, ಬೆಂಗಳೂರು ಇವರ ಕಛೇರಿಯಲ್ಲಿ ದಾಖಲಿಸಲಾಗಿದೆ |

| | | | |
|---|---|---|---|
| 04 | 2021–2022 ನೇ ಸಾಲಿನಿಂದ ಅನ್ವಯವಾಗುವಂತೆ ಸಂಸ್ಥೆಯ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡುವ ಬಗ್ಗೆ. | ಸಂಸ್ಥೆಯಲ್ಲಿ ಪ್ರಸ್ತುತ ಲೆಕ್ಕಪರಿಶೋಧಕರಾಗಿ ಮೆ॥ ಎಮ್ ಎಸ್ ಆರ್ ಕೆ ಅಂಡ್ ಕಂಪನಿ. ಚಾರ್ಟೆಡ್ ಅಕೌಂಟೆಟ್ಸ್, ನಂ.176, ಮೂರನೇ ಮಹಡಿ 10ನೇ ಅಡ್ಡರಸ್ತೆ, ಮಲ್ಲೇಶ್ವರಮ್, ಬೆಂಗಳೂರು–560 003 ಇವರು 2018–2019 ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರ ಕಾರ್ಯದ ಅವಧಿಯು ಆರ್ಥಿಕ ವರ್ಷ 2020–21ಕ್ಕೆ ಮುಕ್ತಾಯಗೊಳ್ಳಲಿದ್ದು, 2021–22ನೇ ಸಾಲಿನಿಂದ ಅನ್ವಯವಾಗುವಂತೆ ನೂತನವಾಗಿ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳಲು, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, ಸಮ್ಮತಿಸಿತು. | 2021–22ನೇ ಸಾಲಿನಿಂದ ಅನ್ವಯವಾಗುವಂತೆ ಶ್ರೀ.ನಾರಾಯಣ್ ಭಟ್ ಅಂಡ್ ಕಂಪನಿ. ಚಾರ್ಟೆಡ್ ಅಕೌಂಟೆಟ್ಸ್, ನಂ.310, ಶ್ರೇಷ್ಠಭೂಮಿ ಸಂಖ್ಯೆ:87, ಶಂಕರಮಠಂ ಬೆಂಗಳೂರು–560004. ಇವರನ್ನು ಮುಂದಿನ ಮೂರು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗಿದೆ. |
| **05** | ಸಂಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳ ಸಂಗ್ರಹಣೆಗೆ ಆಡಳಿತಾತ್ಮಕ ಅನುಮೋದನೆಗಾಗಿ ಶಿಫಾರಸ್ಸು ನೀಡುವ ಬಗ್ಗೆ. | ರೂ. 742 ಲಕ್ಷ (ರೂಪಾಯಿಗಳು ಏಳು ಸಾವಿರದ ನಲವತ್ತೆರಡು ಲಕ್ಷ ಮಾತ್ರ) ಅಂದಾಜು ವೆಚ್ಚದಲ್ಲಿ ಮೇಲ್ಕಂಡ ವೈದ್ಯಕೀಯ ಉಪಕರಣಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ಗಳನ್ನು ಅನುಸರಿಸಿ ಸಂಸ್ಥೆಯಲ್ಲಿ ಲಭ್ಯವಿರುವ ಹಣಕಾಸಿನಲ್ಲಿ ಖರೀದಿಸಲು ಆರ್ಥಿಕ ಸಮಿತಿಯು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿತು. | ಆರ್ಥಿಕ ಸಮಿತಿಯು ಶಿಫಾರಸ್ಸು ಮತ್ತು ಆಡಳಿತ ಮಂಡಳಿಯ ಅನುಮೋದನೆ ವೈದ್ಯಕೀಯ ಉಪಕರಣಗಳನ್ನು ಖರೀದಿ ಮಾಡುವ ಪ್ರಕ್ರಿಯೆ ಕಾರ್ಯ ಹಂತದಲ್ಲಿದೆ. |
| 06 | ಸಂಸ್ಥೆಯ ಅನೆಕ್ಸ್ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಹೆಚ್ಚುವರಿ ಸಿಬ್ಬಂದಿ ಅಗತ್ಯತೆಯ ಬಗ್ಗೆ ಆಡಳಿತಾತ್ಮಕ | ಸರ್ಕಾರದ ಆದೇಶ ಸಂಖ್ಯೆ:ಆಕುಕ/16/ಎಂಎಸ್ಎ/2016 ದಿನಾಂಕ: 06/04/2017ರ ಪ್ರಕಾರ ಅನೆಕ್ಸ್ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು | ಆರ್ಥಿಕ ಇಲಾಖೆಯ ಸಹಮತಿಗಾಗಿ ಏಕಕಡತದಲ್ಲಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ. |

| | | | |
|---|---|---|---|
| | ಅನುಮೋದನೆಗಾಗಿ ಶಿಫಾರಸ್ಸು ನೀಡುವ ಬಗ್ಗೆ. | ಅಗತ್ಯವಿರುವ ಹುದ್ದೆಗಳು ಸೃಜನೆಗಾಗಿ ಹುದ್ದೆಗಳ ವಿವರ ಹಾಗೂ ವೆಚ್ಚದ ವಿವರಗಳೊಂದಿಗೆ ಪ್ರತ್ಯೇಕ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿದೆ. ಸದರಿ ಅನೆಕ್ಸ್ ಕಟ್ಟಡವು 2022-23ರ ಸಾಲಿನಲ್ಲಿ ಕಾರ್ಯಾರಂಭವಾಗಲಿದ್ದು, ತತ್ಸಂಬಂಧ ಅಗತ್ಯವಾದ ಹುದ್ದೆಗಳ ಸೃಜಿಸಲು ಆಡಳಿತ ಮಂಡಳಿಯ ಅನುಮೋದನೆಗಾಗಿ ಶಿಫಾರಸ್ಸು ಮಾಡುವಂತೆ ಕೋರಲಾಗಿ, ಆರ್ಥಿಕ ಇಲಾಖೆಯ ಸಹಮತಿಗಾಗಿ ಏಕಕಡತದಲ್ಲಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿ ಅನುಮೋದನೆ ಪಡೆಯುವಂತೆ ಸೂಚಿಸಲಾಯಿತು. | |
| 07 | ಸಂಸ್ಥೆಯಲ್ಲಿ ಜರುಗುವ Ethics Committee meeting ನಲ್ಲಿ ಭಾಗವಹಿಸುವ ಸಂಸ್ಥೆಯೇತರ ಸದಸ್ಯರುಗಳಿಗೆ ಪಾವತಿಸಲಾಗುತ್ತಿರುವ Sitting Fee ಮೊತ್ತವನ್ನು ಹೆಚ್ಚಿಸಲು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವ ಬಗ್ಗೆ. | ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ಜರುಗುವ Ethics Committee meeting ನಲ್ಲಿ ಭಾಗವಹಿಸುವ ಸಂಸ್ಥೆಯೇತರ ಸದಸ್ಯರುಗಳಿಗೆ Sitting Fee ಮೊತ್ತ ರೂ 1000.00 (ರೂ. ಒಂದು ಸಾವಿರ ಮಾತ್ರ) ಪಾವತಿಸಲಾಗುತ್ತಿದೆ. ಸದರಿ ಮೊತ್ತವನ್ನು ಪರಿಷ್ಕರಿಸಲು ಪ್ರಸ್ತಾಪಿಸಿದ್ದು, ಈಗಾಗಲೇ ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಪಾವತಿಸಲಾಗುತ್ತಿರುವ ರೂ. 2500.00ಗಳಿಗೆ ಪರಿಷ್ಕರಿಸಲು ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ ಸಮ್ಮತಿಸಿತು. | ಆರ್ಥಿಕ ಸಮಿತಿಯ ಶಿಫಾರಸ್ಸು ಮತ್ತು ಆಡಳಿತ ಮಂಡಳಿಯ ಅನುಮೋದನೆಯಂತೆ ಪಾವತಿಸಲಾಗುವುದು. |
| 08 | ಸಂಸ್ಥೆಯಲ್ಲಿ ಮಂಜೂರಾದ ಹುದ್ದೆಗಳ ಎದುರು | ಸರ್ಕಾರದ ಆದೇಶ ಸಂಖ್ಯೆ : ಆಕುಕ 224 ಎಂಎಂಇ 7 2018 | ಆರ್ಥಿಕ ಇಲಾಖೆಯ ಸಹಮತಿಗಾಗಿ ಏಕಕಡತದಲ್ಲಿ |

| | | | |
|---|---|---|---|
| | ಹುದ್ದೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠವೇತನ ಪರಿಷ್ಕರಿಸಿ ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವ ಬಗ್ಗೆ. | ದಿನಾಂಕ : 26.02.2019ರಂತೆ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಆಧಾರಿತ ನೌಕರರಿಗೆ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೆ ಆಯಾ ಹುದ್ದೆಯ 2018ರ ಪರಿಷ್ಕೃತ ವೇತನ ಶ್ರೇಣಿಯ ಸಂವಾದಿ ಕನಿಷ್ಠ ಹಂತದಲ್ಲಿ ವೇತನ ನಿಗದಿಗೊಳಿಸಿ ಆದೇಶಿಸಿದೆ. ಈ ಸಂಸ್ಥೆಯಲ್ಲಿ ಮಂಜೂರಾದ ವಿವಿಧ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳ ಎದುರು ಹುದ್ದೆಯಲ್ಲಿ ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರುಗಳಿಗೆ ಕನಿಷ್ಠ ವೇತನ ನಿಗದಿ ಕಾಯ್ದೆಯುಡಿಯಲ್ಲಿ ನಿಗದಿಪಡಿಸಿರುವ ವೇತನವನ್ನುಪಾವತಿಸಲಾಗುತ್ತಿದೆ. ಸದರಿ ಮೊತ್ತವು ತುಂಬಾ ಕಡಿಮೆ ಇದ್ದು, ಇದರಿಂದಾಗಿ ಇವರ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿರುತ್ತದೆ ಇದರಿಂದಾಗಿ ಇವರುಗಳು ಆಗಾಗ ಕೆಲಸವನ್ನು ಬಿಟ್ಟು ಹೋಗುತ್ತಿರುತ್ತಾರೆ. ಇದರಿಂದಾಗಿ ಅನುಭವಿ ಸಿಬ್ಬಂದಿಗಳ ಕೊರತೆಯಿಂದಾಗಿ ಆಸ್ಪತ್ರೆಯ ಕೆಲಸಕಾರ್ಯಗಳಿಗೆ ಹಾಗೂ ರೋಗಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಕೋವಿಡ್–19 ರಂತಹ ಸಾಂಕ್ರಾಮಿಕ ರೋಗದ ಹರಡುವಿಕೆ | ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ. |

| | | | |
|---|---|---|---|
| | | ಸಂಧರ್ಭದ ಈಗಾಗಲೇ ಇರುವ ಕನಿಷ್ಠ ವೇತನದ ಅಡಿಯಲ್ಲಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೇಲೆ ಹೊಂದಿಸಿ ಆಸ್ಪತ್ರೆಯ ಕರ್ತವ್ಯವನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿರುತ್ತದೆ, ಸದರಿ ಹುದ್ದೆಗಳಿಗೆ ಸರ್ಕಾರ ನಿಗದಿಪಡಿಸಿರುವ ಮೂಲವೇತನಕ್ಕೆ ಸಮಾನವಾಗಿ ಕನಿಷ್ಠವೇತನ ನಿಗದಿಪಡಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿರುತ್ತದೆ. ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನ ಸಂಸ್ಥೆಗಳಲ್ಲಿನ ಆಸ್ಪತ್ರೆಗಳಲ್ಲಿ ಇಂತಹ ಹುದ್ದೆಗಳಿಗೆ ಕನಿಷ್ಠ ಮೂಲ ವೇತನವನ್ನು ಪಾವತಿಸಲಾಗುತ್ತಿದ್ದು, ನಮ್ಮ ಸಂಸ್ಥೆಯಲ್ಲಿಯೂ ಸದರಿ ಹುದ್ದೆಗಳ ಕನಿಷ್ಟ ಮೂಲ ವೇತನಕ್ಕೆ ಮೀರದಂತೆ ಕನಿಷ್ಠ ವೇತನ ನಿಗದಿ ಪಡಿಸಿ ಇ–ಟೆಂಡರ್ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆದುಕೊಳ್ಳಲು ಆರ್ಥಿಕ ಸಮಿತಿಯಿಂದ ಅನುಮೋದನೆ ಕೋರುತ್ತಾ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವಂತೆ ಕೋರಿದನ್ವಯ, ಸದರಿ ಪ್ರಸ್ತಾವನೆಯನ್ನು ಏಕಕಡತದಲ್ಲಿ ಆರ್ಥಿಕ ಇಲಾಖೆಗೆ ಮಂಡಿಸುವಂತೆ ಸೂಚಿಸಿತು. | |

ಮೇಲ್ಕಂಡ ದಿನಾಂಕ : 20.07.2021ರ ಆರ್ಥಿಕ ಸಮಿತಿ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ದಿನಾಂಕ : 24.01.2022 ರ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ಬಗ್ಗೆ ಆರ್ಥಿಕ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಲಾಗಿ, ಸಮ್ಮತಿಸಿದ ಮೇರೆಗೆ, ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಆಡಳಿತ ಮಂಡಳಿಯು ಸಮ್ಮತಿಸಿತು.

<u>ವಿಷಯ 3 : ದಿನಾಂಕ : 15.07.2022 ರಂದು ಜರುಗಿದ ನೆಫ್ರೋ-ಯುರಾಲಜಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಕೆಳಕಂಡ ಶಿಫಾರಸ್ಸುಗಳನ್ನು ಅನುಮೋದಿಸಿತು :</u>

<u>ಅಜೆಂಡಾ (ಅ) :</u> ನೆಫ್ರೋ-ಯುರಾಲಜಿ ಸಂಸ್ಥೆಗೆ 2021-22ನೇ ಸಾಲಿನಲ್ಲಿ ಸಿಬ್ಬಂದಿಗಳ ವೇತನ, ಔಷಧಿ ಖರೀದಿ, ಕಟ್ಟಡ ಕಾಮಗಾರಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನ, ಸ್ವೀಕರಿಸಿರುವ ಅನುದಾನ ಹಾಗೂ ಏಪ್ರಿಲ್-2021 ರಿಂದ ಮಾರ್ಚ್-2022ರ ಅಂತ್ಯದವರೆಗಿನ ವೆಚ್ಚಗಳಿಗೆ ಆರ್ಥಿಕ ಸಮಿತಿ ಸಭೆಯಲ್ಲಿ ಸ್ಥಿರೀಕರಣ ಕೋರಲಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

| ಕ್ರ ಸಂ | ಲೆಕ್ಕ ಶೀರ್ಷಿಕೆ ಹಾಗೂ ವಿವರಣೆ | ಆರಂಭದ ಶುಲ್ಕ (2021-22) ರೂ.ಲಕ್ಷಗಳಲ್ಲಿ | ಆರಂಭದ ಹಂಚಿಕೆ 2021-22 ರೂ..ಲಕ್ಷಗಳಲ್ಲಿ | ಅನುದಾನ ಸ್ವೀಕೃತಿ 2021-22 (ಏಪ್ರಿಲ್-2021 ರಿಂದ ಮಾರ್ಚ್ 2022 ಅಂತ್ಯಕ್ಕೆ) | ಒಟ್ಟು ಅನುದಾನ ಸ್ವೀಕೃತಿ+ಆರಂಭಿಕ ಶುಲ್ಕ (ಏಪ್ರಿಲ್-2021 ರಿಂದ ಮಾರ್ಚ್ 2022 ಅಂತ್ಯಕ್ಕೆ) | ವೆಚ್ಚ(ರೂ. ಲಕ್ಷಗಳಲ್ಲಿ (ಏಪ್ರಿಲ್-2021 ರಿಂದ ಮಾರ್ಚ್ 2022 ಅಂತ್ಯಕ್ಕೆ)) | ಬಾಕಿ ಅನುದಾನ ರೂ. ಲಕ್ಷಗಳಲ್ಲಿ |
|---|---|---|---|---|---|---|---|
| 1 | 2210-05-105-1-34-101 (ಸ) ವೇತನಗಳು | ---- | 1996.00 | 1829.63 | 1829.63 | 1754.96 | 74.66 |
| 2 | 2210-05-105-1-34-103 (ಸ) ಸಾಮಾನ್ಯವೆಚ್ಚಗಳು | ---- | 1185.00 | 1185.00 | 1185.00 | 1185.00 | ---- |
| 3 | 2210-05-105-1-34-115 (ಸ) ಗುತ್ತಿಗೆ/ಹೊರಗುತ್ತಿಗೆ | 504.68 | 698.00 | 698.00 | 1202.68 | 833.00 | 369.68 |
| 4 | 2210-05-105-1-34-118 (ಸ) ಪಿಂಚಣಿಗಳು/ಹೊಸ ಪಿಂಚಣಿ ವೇತನಗಳು | ---- | 197.00 | 197.00 | 197.00 | 197.00 | ---- |
| 5 | 2210-05-105-1-34-422 (ಎಸ್.ಸಿ.ಪಿ) | 17.87 | 172.00 | 172.00 | 189.87 | 189.87 | ---- |
| 6 | 2210-05-105-1-34-423 (ಟಿ.ಎಸ್.ಪಿ) | --- | 43.00 | 43.00 | 43.00 | 37.32 | 5.68 |
| 7 | 4210-05-105 ಸಿವಿಲ್ ಕಾಮಗಾರಿ | ---- | ---- | ---- | ---- | ---- | ---- |
| | ಒಟ್ಟು | 522.55 | **4291** | **4124.63** | **4647.18** | **4197.15** | **450.03** |

2021-22ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ - 2210-05-105-1-34-115 ರಡಿಯಲ್ಲಿ ರೂ. 369.68 ಬಾಕಿ ಉಳಿದಿದ್ದು, ಸದರಿ ಅನುದಾನವು 2022-23ನೇ ಸಾಲಿನಲ್ಲಿ ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸಲು ಉಪಯೋಗಿಸಲಾಗುತ್ತದೆ ಇದಕ್ಕೆ ಆರ್ಥಿಕ ಸಮಿತಿ ಸಭೆಯ ಸ್ಥಿರೀಕರಣ ಕೋರಲಾಗಿ, ಪ್ರಸ್ತಾಪಿತ

ಲೆಕ್ಕಶೀರ್ಷಿಕೆವಾರು ಸ್ವೀಕೃತಿ ಮತ್ತು ವೆಚ್ಚಗಳಿಗೆ ಆರ್ಥಿಕ ಸಮಿತಿ ಸಭೆಯು ಅನುಮೋದಿಸಿ, ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

ಅಜೆಂಡಾ (ಇ) : 2022–23ನೇ ಸಾಲಿಗೆ ಲೆಕ್ಕಶೀರ್ಷಿಕೆ–2210–05–105–1–34–101 ವೇತನದಡಿಯಲ್ಲಿ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಲಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಿದೆ.

2210–05–105–1–34–101 (ವೇತನಗಳು)

| ಕ್ರಸಂ | ವಿವರ | ಆರಂಭಿಕ ಶುಲ್ಕ (2022–23) (ರೂ.ಗಳಲ್ಲಿ) | 2022–23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗಳಲ್ಲಿ) | ಸರ್ಕಾರದಿಂದ ಹಂಚಿಕೆಯಾದ ಅನುದಾನ 2022–23 (ರೂ.ಗಳಲ್ಲಿ) | 2021–22 ಮುಕ್ತಾಯದ ಶುಲ್ಕ ಸೇರಿ) ಒಟ್ಟು (ರೂ.ಗಳಲ್ಲಿ) |
|---|---|---|---|---|---|
| 01 | 2210–05–105–1–34–101 ವೇತನಗಳು | ----- | 2267.00 | 2267.00 | 2267.00 |

| ಕ್ರಸಂ | ವಿವರಗಳು | 2021–22 ಕ್ಕೆ ಸರ್ಕಾರದಿಂದ ಹಂಚಿಕೆಯಾಗಿರುವ ಹಾಗೂ 2020–21ಕ್ಕೆ ಮುಕ್ತಾಯದ ಶುಲ್ಕ ಸೇರಿ ಅನುದಾನಕ್ಕೆ ಕ್ರಿಯಾಯೋಜನೆ (ರೂ.ಗಳಲ್ಲಿ) | ಒಟ್ಟು ವೆಚ್ಚಗಳು ರೂ.ಗಳಲ್ಲಿ ಮಾರ್ಚ್ 2022ರವರೆಗೆ | ಬಾಕಿ ಮೊತ್ತ ರೂ.ಗಳಲ್ಲಿ ಮಾರ್ಚ್ 2022ರವರೆಗೆ | 2022–23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗ | 2022–23ನೇ ಸಾಲಿನ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆ | (2021–22 ರ ಮುಕ್ತಾಯದ ಶುಲ್ಕ ಸೇರಿ (ರೂ.ಗಳಲ್ಲಿ) ಒಟ್ಟು ಮೊತ್ತ 2022–23 |
|---|---|---|---|---|---|---|---|
| 01 | ಅಧಿಕಾರಿಗಳ ವೇತನ/ಐಐಸಿಟಿ ಇ ವೈದ್ಯರುಗಳ ವೇತನ ಹಾಗೂ ಇತರೆ ಸಿಬ್ಬಂದಿಗಳ ವೇತನಗಳು | 665.20 | 647.16 | 18.04 | 744.00 | 744.00 | 762.04 |
| 02 | ಭೋದಕೇತರ ಸಿಬ್ಬಂದಿಗಳ ವೇತನ ಮತ್ತು ಇತರ ಭತ್ಯಗಳು | 906.90 | 868.90 | 38.00 | 1219.60 | 1219.60 | 1257.60 |
| 03 | ಆಕುಕ ಬೋಧಕ/ಬೋಧಕೇತರ | 27.74 | 27.74 | 00 | 30.00 | 30.00 | 30.00 |

| | | | | | | | |
|---|---|---|---|---|---|---|---|
| | (ನಿಯೋಜಿತ ವೈದ್ಯರುಗಳ) ವೇತನ ಮತ್ತು ಇತರೆ ಭತ್ಯೆಗಳು | | | | | | |
| 04 | ಸ್ನಾತಕೋತ್ತರ ಮತ್ತು ಗೃಹ ವೈದ್ಯರುಗಳ ಶಿಷ್ಯವೇತನ | 167.32 | 167.32 | 00 | 200.48 | 200.48 | 200.48 |
| 05 | ರಜೆ ನಗದೀಕರಣ ವೆಚ್ಚಗಳು (ನಿವೃತ್ತ ನೌಕರರು ಸೇರಿದಂತೆ) | 62.47 | 43.85 | 18.62 | 72.92 | 72.92 | 91.54 |
| | ಒಟ್ಟು | 1829.63 | 1754.97 | 74.66 | 2267.00 | 2267.00 | 2341.660 |

ಮೇಲ್ಕಂಡಂತೆ 2022–23ನೇ ಸಾಲಿಗೆ ಲೆಕ್ಕಶೀರ್ಷಿಕೆ–2210–05–105–1–34–101 ವೇತನದಡಿಯಲ್ಲಿ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಸಿದ್ಧಪಡಿಸಿದ್ದ ಕ್ರಿಯಾ ಯೋಜನೆಗೆ ಆರ್ಥಿಕ ಸಮಿತಿಯ ಸಭೆಯ ಅನುಮೋದನೆ ಕೋರಲಾಗಿ, ಅನುಮೋದಿಸಿ ಆಡಳಿತ ಮಂಡಳಿ ಸಭೆಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿ, ಮೇಲ್ಕಂಡ ಕ್ರಿಯಾಯೋಜನೆಗೆ ಆಡಳಿತ ಮಂಡಳಿಯು ಅನುಮೋದನೆ ನೀಡಿತು.

**ಅಜೆಂಡಾ (ಈ) : 2022–23ನೇ ಸಾಲಿಗೆ ಲೆಕ್ಕಶೀರ್ಷಿಕೆ–2210–05–105–1–34–103ರಡಿಯಲ್ಲಿ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿದೆ.**

<u>2210–05–105–1–34–103 (ಸಾಮಾನ್ಯ ವೆಚ್ಚ)</u>

| ಕ್ರ. ಸಂ | ವಿವರ | ಆರಂಭಿಕ ಶುಲ್ಕ (2022–23) (ರೂ.ಗಳಲ್ಲಿ) | 2022–23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗಳಲ್ಲಿ) | ಸರ್ಕಾರದಿಂದ ಹಂಚಿಕೆಯಾದ ಅನುದಾನ 2022–23 (ರೂ.ಗಳಲ್ಲಿ) | 2021–22 (ಮುಕ್ತಾಯದ ಶುಲ್ಕ ಸೇರಿ) ಒಟ್ಟು (ರೂ.ಗಳಲ್ಲಿ) |
|---|---|---|---|---|---|
| 01 | 2210–05–105–1–34–103 ಸಾಮಾನ್ಯ ವೆಚ್ಚಗಳು | 00 | 2539.00 | 1241.00 | 1241.00 |

| ಕ್ರ. ಸಂ | ವಿವರಗಳು | 2021–22 ಕ್ಕೆ ಸರ್ಕಾರದಿಂದ ಹಂಚಿಕೆಯಾಗಿರುವ ಹಾಗೂ 2020–21ಕ್ಕೆ ಮುಕ್ತಾಯದ ಶುಲ್ಕ ಸೇರಿ ಅನುದಾನಕ್ಕೆ ಕ್ರಿಯಾಯೋಜನೆ (ರೂ.ಲಕ್ಷಗಳಲ್ಲಿ) | ಒಟ್ಟು ವೆಚ್ಚಗಳು (ರೂ.ಲಕ್ಷಗಳಲ್ಲಿ) | ಬಾಕಿ ಮೊತ್ತ ರೂಗಳಲ್ಲಿ ಮಾರ್ಚ್ 2022ರವರೆಗೆ | 2022–23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಲಕ್ಷಗಳಲ್ಲಿ) | 2021–22 ರ ಮುಕ್ತಾಯದ ಶುಲ್ಕ ಸೇರಿ (ರೂ.ಲಕ್ಷಗಳಲ್ಲಿ) |
|---|---|---|---|---|---|---|

| | | | | | | |
|---|---|---|---|---|---|---|
| 01. | ಕಛೇರಿ ವೆಚ್ಚಗಳು | 5.00 | 2.94 | 2.06 | 5.00 | 7.06 |
| 02 | ದೂರವಾಣಿ ವೆಚ್ಚಗಳು | 5.00 | 2.58 | 2.42 | 5.00 | 7.42 |
| 03 | ಸ್ಟೇಷನರಿ & ಪ್ರಿಂಟಿಂಗ್, | 30.00 | 18.15 | 11.85 | 35.00 | 46.85 |
| 04 | ಜಾಹೀರಾತು ವೆಚ್ಚಗಳು | 5.00 | 3.38 | 1.62 | 6.00 | 7.62 |
| 05 | ವಿದ್ಯುತ್ ಮತ್ತು ನೀರು ವೆಚ್ಚಗಳು | 120.00 | 96.16 | 23.84 | 130.00 | 153.84 |
| 06 | ಆಸ್ಪತ್ರೆ ಉಪಸಾಧನಗಳು | 50.00 | 74.04 | -24.04 | 75.00 | 50.96 |
| 07 | ಇಂಧನ | 5.00 | 5.13 | -0.13 | 6.00 | 5.87 |
| 08 | ವಾಹನ ದುರಸ್ಥಿ | 3.00 | 2.27 | 0.73 | 5.00 | 5.73 |
| 09 | ಕಟ್ಟಡ ನಿರ್ವಹಣೆಗಳು ದುರಸ್ತಿ/ನವೀಕರಣ | 50.00 | 50.00 | 00 | 75.00 | 75.00 |
| 10 | ಸಾರಿಗೆ ವೆಚ್ಚಗಳು | 3.00 | 0.96 | 2.04 | 20.00 | 22.04 |
| 11 | ಪೀಠೋಪಕರಣಗಳು | 10.00 | 3.01 | 6.99 | 50.00 | 56.99 |
| 12 | ವೈದ್ಯಕೀಯ ಉಪಕರಣಗಳು | 53.00 | 150.10 | -97.10 | 750.00 | 652.90 |

| ಕ್ರ ಸಂ | ವಿವರಗಳು | 2021–22 ಕ್ಕೆ ಸರ್ಕಾರದಿಂದ ಹಂಚಿಕೆಯಾಗಿರುವ ಹಾಗೂ 2020–21ಕ್ಕೆ ಮುಕ್ತಾಯದ ಶುಲ್ಕ ಸೇರಿ ಅನುದಾನಕ್ಕೆ ಕ್ರಿಯಾಯೋಜನೆ (ರೂ.ಲಕ್ಷಗಳಲ್ಲಿ) | ಒಟ್ಟು ವೆಚ್ಚಗಳು (ರೂ.ಲಕ್ಷಗಳಲ್ಲಿ) | ಬಾಕಿ ಮೊತ್ತ ರೂ.ಗಳಲ್ಲಿ ಮಾರ್ಚ್ 2022ರವರೆಗೆ | 2022–23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಲಕ್ಷಗಳಲ್ಲಿ) | 2021–22 ರ ಮುಕ್ತಾಯದ ಶುಲ್ಕ ಸೇರಿ (ರೂ.ಲಕ್ಷಗಳಲ್ಲಿ) |
|---|---|---|---|---|---|---|
| 13 | ಆತಿಥ್ಯ ವೆಚ್ಚ | 3.00 | 1.47 | 1.53 | 3.00 | 4.53 |
| 14 | ಗ್ರಂಥಾಲಯ | 40.00 | 40.00 | --- | 40.00 | 40.00 |
| 15 | ಕ್ಷಕಿರಣ ಫಿಲಂಸ್ | 22.00 | 23.18 | –1.18 | 23.00 | 21.82 |
| 16 | ವೃತ್ತಿನಿರತ ಶುಲ್ಕ | 16.00 | 5.10 | 10.90 | 10.00 | 20.90 |
| 17 | ಕಂಪ್ಯೂಟರ್ | 10.00 | 6.14 | 3.86 | 20.00 | 23.86 |
| 18 | ಎಎಂಸಿ/ಸಿಎಂಸಿ (ಉಪಕರಣಗಳು) | 50.00 | 49.90 | 0.10 | 50.00 | 50.10 |
| 19 | ಔಷಧ,ರಸಾಯನಿಕ ಮತ್ತು ಇತರೆ ಶುಲ್ಕಗಳು | 500.00 | 500.00 | 00.00 | 1000 | 1000 |
| 20 | ಪಥ್ಯಾಹಾರ | 15.00 | 6.40 | 8.60 | 15.00 | 23.60 |
| 21 | ಲಿನನ್ | 10.00 | 7.50 | 2.50 | 30.00 | 32.50 |
| 22 | ದುರಸ್ಥಿ ಮತ್ತು ನಿರ್ವಹಣೆ | 129.00 | 105.88 | 23.12 | 154.00 | 177.12 |
| 23 | ಕೈತೋಟ ನಿರ್ವಹಣೆ | 5.00 | 5.00 | 0 | 5.00 | 5.00 |
| 24 | ಕಾರ್ಯಾಗಾರಗಳ ವೆಚ್ಚಗಳು | 15.00 | 1.56 | 13.44 | 15.00 | 28.44 |
| 25 | ವೈದ್ಯಕೀಯ ಮರುಪಾವತಿ | 10.00 | 3.28 | 6.72 | 10.00 | 16.72 |
| 26 | ದರ ಮತ್ತು ತೆರಿಗೆಗಳು | 21.00 | 20.87 | 0.13 | 20.00 | 20.13 |
| | ಒಟ್ಟು ಮೊತ್ತ | 1185.00 | 1185.00 | 00.00 | 2539.00 | 2539.00 |

ಮೇಲ್ಕಂಡಂತೆ 2022–23ನೇ ಸಾಲಿಗೆ ಲೆಕ್ಕಶೀರ್ಷಿಕೆ 103 ಅಡಿಯಲ್ಲಿ ರೂ. 2539.00 ಗಳನ್ನು ಬಿಡುಗಡೆ ಮಾಡುವಂತೆ ಕೋರಲಾಗಿದ್ದು, ರೂ.1241.00 ಲಕ್ಷಗಳು ಹಂಚಿಕೆಯಾಗಿರುವುದರಿಂದ ವ್ಯತ್ಯಾಸದ ಮೊತ್ತ ರೂ. 1298.00 ಲಕ್ಷಗಳನ್ನು ಸಂಸ್ಥೆಯ ಆಂತರಿಕ ಸಂಪನ್ಮೂಲಗಳಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಲಾಗಿ, ಅನುಮೋದಿಸಿ, ಆಡಳಿತ ಮಂಡಳಿ ಸಭೆಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

ಅಜೆಂಡಾ (ಉ) : 2022–23ನೇ ಸಾಲಿಗೆ ಲೆಕ್ಕಶೀರ್ಷಿಕೆ–2210–05–105–1–34–115 ಗುತ್ತಿಗೆ/ಹೊರಗುತ್ತಿಗೆಯಡಿಯಲ್ಲಿ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಲಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸಿನನ್ವಯ ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

**2210–05–105–1–34–115 (ವೇತನಗಳು)**

| ಕ್ರ. ಸಂ | ವಿವರ | ಆರಂಭಿಕ ಶುಲ್ಕ (2022–23) (ರೂ.ಗಳಲ್ಲಿ) | 2022–23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗಳಲ್ಲಿ) | ಸರ್ಕಾರದಿಂದ ಹಂಚಿಕೆಯಾದ ಅನುದಾನ 2022–23 (ರೂ.ಗಳಲ್ಲಿ) | 2021–22 ಮುಕ್ತಾಯದ ಶುಲ್ಕ ಸೇರಿ) ಒಟ್ಟು (ರೂ.ಗಳಲ್ಲಿ) |
|---|---|---|---|---|---|
| 01 | 2210–05–105–1–34–115 ವೇತನಗಳು | 369.00 | 1183.77 | 698.00 | 1067.00 |

| ಕ್ರ. ಸಂ. | ವಿವರಗಳ | 2021–22 ಕ್ಕೆ ಸರ್ಕಾರದಿಂದ ಹಂಚಿಕೆಯಾಗಿರುವ ಹಾಗೂ 2020–21ಕ್ಕೆ ಮುಕ್ತಾಯದ ಶುಲ್ಕ ಸೇರಿ ಅನುದಾನಕ್ಕೆ ಕ್ರಿಯಾಯೋಜನೆ (ರೂ.ಗಳಲ್ಲಿ) | ಒಟ್ಟು ವೆಚ್ಚಗಳು ರೂ.ಗಳಲ್ಲಿ ಮಾರ್ಚ್ 2022ರವರೆಗೆ | ಬಾಕಿ ಮೊತ್ತ ರೂ.ಗಳಲ್ಲಿ ಮಾರ್ಚ್ 2022ರವರೆಗೆ | 2022–23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗಳಲ್ಲಿ) | 2022–23ನೇ ಸಾಲಿನ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆ | (2021–22 ರ ಮುಕ್ತಾಯದ ಶುಲ್ಕ ಸೇರಿ (ರೂ.ಗಳಲ್ಲಿ) ಒಟ್ಟು ಮೊತ್ತ 2022–23 |
|---|---|---|---|---|---|---|---|
| 01 | ಭದ್ರತಾ ಸಿಬ್ಬಂದಿ ವೇತನಗಳು(ಹೊರಗುತ್ತಿಗೆ) | 290.03 | 292.41 | –1.38 | 324.00 | 190.77 | 189.39 |
| 02 | ಸ್ವಚ್ಛತಾ ಸಿಬ್ಬಂದಿ ವೇತನಗಳು (ಹೊರಗುತ್ತಿಗೆ) | 19.35 | 19.35 | 00 | 62.32 | 36.69 | 36.69 |
| 03 | ತಾಂತ್ರಿಕ/ತಾಂತ್ರಿಕೇತರ, ಗ್ರೂಪ್ ಸಿ ಮತ್ತು ಡಿ ವೇತನಗಳು (ಹೊರಗುತ್ತಿಗೆ) | 337.52 | 331.16 | 36.44 | 475.66 | 280.05 | 316.50 |
| 04 | ಜೂನಿಯರ್ ರೆಸಿಡೆಂಟ್/ ಟ್ಯೂಟರ್ ವೇತನಗಳು (ಗುತ್ತಿಗೆ) | 126.72 | 109.67 | 17.05 | 126.00 | 74.18 | 91.23 |

| ಕ್ರ ಸಂ. | ವಿವರಗಳ | 2021-22 ಕ್ಕೆ ಸರ್ಕಾರದಿಂದ ಹಂಚಿಕೆಯಾಗಿರುವ ಹಾಗೂ 2020-21ಕ್ಕೆ ಮುಕ್ತಾಯದ ಶುಲ್ಕ ಸೇರಿ ಅನುದಾನಕ್ಕೆ ಕ್ರಿಯಾಯೋಜನೆ (ರೂ.ಗಳಲ್ಲಿ) | ಒಟ್ಟು ವೆಚ್ಚಗಳು ರೂ.ಗಳಲ್ಲಿ ಮಾರ್ಚ್ 2022ರವರೆಗೆ | ಬಾಕಿ ಮೊತ್ತ ರೂ.ಗಳಲ್ಲಿ ಮಾರ್ಚ್ 2022ರವರೆಗೆ | 2022-23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗಳಲ್ಲಿ) | 2022-23ನೇ ಸಾಲಿನ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆ | (2021-22 ರ ಮುಕ್ತಾಯದ ಶುಲ್ಕ ಸೇರಿ (ರೂ.ಗಳಲ್ಲಿ) ಒಟ್ಟು ಮೊತ್ತ 2022-23 |
|---|---|---|---|---|---|---|---|
| 05 | ಕ್ರೋಢೀಕೃತ/ ಅಡಹಾಕ್ ಸಿಬ್ಬಂದಿಗಳ ವೇತನ (ಗುತ್ತಿಗೆ) | 12.48 | 13.10 | -0.62 | 15.00 | 8.83 | 8.21 |
| 06 | ಸಂದರ್ಶಕ ವೈದ್ಯರ ವೇತನಗಳು | 180.00 | 67.93 | 112.07 | 180.00 | 106.53 | 218.60 |
| | **ಒಟ್ಟು ಮೊತ್ತ** | **996.18** | **833.62** | **162.56** | **1183.77** | **697.06** | **860.62** |

2022-23 ನೇ ಸಾಲಿನಲ್ಲಿ ಅನುದಾನ ಬೇಡಿಕೆಗಿಂತ ಹಂಚಿಕೆಯಾಗಿರುವ ಅನುದಾನ ಕಡಿಮೆಯಿದ್ದು, ವ್ಯತ್ಯಾಸದ ಮೊತ್ತವನ್ನು ಬಾಕಿಯಿರುವ ಅನುದಾನ ಹಾಗೂ ಕಾಲಕಾಲಕ್ಕೆ ಜಮೆ ಆಗುವ ಬಡ್ಡಿಯನ್ನು ಉಪಯೋಗಿಸಲು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಲಾಗಿ, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಅನುಮೋದಿಸಿ, ಆಡಳಿತ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ನೀಡಿದ ಮೇರೆಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ಅಜೆಂಡಾ (ಊ) : ನೆಪ್ರೋ-ಯುರಾಲಜಿ ಸಂಸ್ಥೆಯ 2022-23 ನೇ ಸಾಲಿಗಾಗಿ ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆ ಅನುದಾನ ಬಳಕೆಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಲಾಗಿ, ಆರ್ಥಿಕ ಸಮಿತಿಯು ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯಲ್ಲಿ ಮಂಡಿಸಿದೆ.**

ನೆಪ್ರೋ-ಯುರಾಲಜಿ ಸಂಸ್ಥೆಯ 2022-23 ನೇ ಸಾಲಿಗಾಗಿ ಬೋಧನ ಆಸ್ಪತ್ರೆಗಳ ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆ ಖಾತೆಯಲ್ಲಿ ರೋಗಿಗಳನ್ನು ಚಿಕಿತ್ಸೆ ನೀಡುವುದರ ಮುಖಾಂತರ ದೊರಕುವ ಹಣವನ್ನು ಬಳಕೆಯ ಕುರಿತಂತೆ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು ಅನುಮೋದನೆಗಾಗಿ ಹಾಗೂ ವಸ್ತುಗಳನ್ನು ಖರೀದಿಸಲು ಕೆ.ಟಿ.ಪಿ.ಪಿ ನಿಯಮ ಹಾಗೂ ಸಂಸ್ಥೆಗಳ ಬೈಲಾಗಳ ಪ್ರಕಾರ ಕ್ರಮ ಕೈಗೊಳ್ಳಲು ಅನುಮತಿ ನೀಡಲು ಹಾಗೂ ಆರ್ಥಿಕ ಸಮಿತಿ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ ಸಂ | ಲೆಕ್ಕ ಶೀರ್ಷಿಕೆ | ಪ್ರಾರಂಭದ ಶುಲ್ಕ 2020–21 | 2021–22ನೇ ಸಾಲಿನಲ್ಲಿ ಸಂಗ್ರಹಿಸಿದ ಅನುದಾನ | ಒಟ್ಟು ಮೊತ್ತ | ಖರ್ಚಾಗಿರುವ ಮೊತ್ತ | ಉಳಿಕೆಯಾಗಿರುವ ಮೊತ್ತ | 2022–23 ನೇ ಸಾಲಿನಲ್ಲಿ ಸಂಗ್ರಹಿಸಬಹುದಾದ ಅನುದಾನ | ಒಟ್ಟು ಮೊತ್ತ |
|---|---|---|---|---|---|---|---|---|
| 01 | ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆ ಖಾತೆ | 00 | 453.29 | 453.29 | 381.25 | 72.04 | 500.00 | 572.04 |

| Sl. No | Name of the proposal | 2021-22 Allocation Amount | 2021-22 Expenditure Amount | 2022-23 Allocation Amount | Mode of Procurement |
|---|---|---|---|---|---|
| 01 | AB – ARK incentive(2021-22) | 63.20 | 63.20 | 70.00 | AB.ARK Scheme guideline |
| 02 | Drugs and chemicals | 250.00 | 250.00 | 250.00 | As per KTTP Act |
| 03 | Medical Equipments | 140.09 | 68.05 | 180.00 | As per KTTP Act |

ನೆಫ್ರೋ–ಯುರಾಲಜಿ ಸಂಸ್ಥೆಯ 2022–23 ನೇ ಸಾಲಿಗಾಗಿ ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆ ಅನುದಾನ ಬಳಕೆಯ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲಾಗಿ, ಮೇಲ್ಕಂಡಂತೆ ಅನುಮೋದಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಆಡಳಿತ ಮಂಡಳಿಯು ಅನುಮೋದಿಸಿತು.

**ಅಜೆಂಡಾ (ಋ) : ನೆಫ್ರೋ–ಯುರಾಲಜಿ ಸಂಸ್ಥೆಯ 2022–23 ನೇ ಸಾಲಿಗಾಗಿ ಬಳಕೆದಾರರ ಖಾತೆಯಲ್ಲಿ ರೋಗಿಗಳನ್ನು ಚಿಕಿತ್ಸೆ ನೀಡುವುದರ ಮುಖಾಂತರ ದೊರಕುವ ಹಣದ ಬಳಕೆಯ ಕುರಿತಂತೆ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು ಅನುಮೋದನೆಗಾಗಿ ಹಾಗೂ ವಸ್ತುಗಳನ್ನು ಖರೀದಿಸಲು ಕೆ.ಟಿ.ಪಿ.ಪಿ ನಿಯಮ ಹಾಗೂ ಸಂಸ್ಥೆಗಳ ಬೈಲಾಗಳ ಪ್ರಕಾರ ಕ್ರಮ ಕೈಗೊಳ್ಳಲು ಅನುಮತಿ ನೀಡಲು ಹಾಗೂ ಆರ್ಥಿಕ ಮಂಡಳಿ ಅನುಮೋದನೆಗಾಗಿ ಸಲ್ಲಿಸಿದೆ.**

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಪ್ರಾರಂ ಭದ ಶುಲ್ಕ | 2021–22ನೇ ಸಾಲಿನಲ್ಲಿ ಸಂಗ್ರಹಿಸಿದ ಅನುದಾನ | ಒಟ್ಟು ಮೊತ್ತ | ಖರ್ಚಾಗಿರುವ ಮೊತ್ತ | ಉಳಿಕೆಯಾಗಿರುವ ಮೊತ್ತ | 2022–23 ನೇ ಸಾಲಿನಲ್ಲಿ ಸಂಗ್ರಹಿಸಬಹುದಾದ ಅನುದಾನ | ಒಟ್ಟು ಮೊತ್ತ |
|---|---|---|---|---|---|---|---|---|
| 01 | ಆರೋಗ್ಯ ರಕ್ಷಾ ಸಮಿತಿಯ ಖಾತೆಯಲ್ಲಿ | 00 | 1418.66 | 1418.66 | 365.67 | 1052.99 | 700.00 | 700.00 |

| Sl No. | Name of the proposal | 2021-22 Allocation Amount | 2021-22 Expenditure Amount | 2022-23 Allocation Amount | Mode of Procurement |
|---|---|---|---|---|---|
| 01 | Drugs and chemicals | 365.67 | 365.67 | 400.00 | As per KTTP Act |
| 02 | Medical Equipments | 25.15 | 25.15 | 300.00 | As per KTTP Act |
| 03 | Surplus amount | 1052.99 | | | |

ಸಂಸ್ಥೆಯ 2022–23 ನೇ ಸಾಲಿನ ಬಳಕೆದಾರರ ಖಾತೆಯಲ್ಲಿರುವ ಮೊತ್ತ (User Charges) ದ ಬಳಕೆಯ ಕುರಿತಂತೆ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು, ಕೆ.ಟಿ.ಪಿ.ಪಿ ನಿಯಮ ಹಾಗೂ ಸಂಸ್ಥೆಗಳ ಬೈಲಾಗಳ ಪ್ರಕಾರ ಅವಶ್ಯಕ ವಸ್ತುಗಳನ್ನು ಖರೀದಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆಗಾಗಿ ಶಿಫಾರಸ್ಸು ನೀಡುವಂತೆ ಕೋರಲಾಗಿ, ಆರ್ಥಿಕ ಸಮಿತಿಯು ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಆಡಳಿತ ಮಂಡಳಿಯ ಅನುಮೋದನೆಗಾಗಿ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಲಾಗಿ, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಅನುಮೋದನೆ ನೀಡಿತು.

**ಅಜೆಂಡಾ (ಎ) : 2021–22ನೇ, ಸಾಲಿನಲ್ಲಿ ಸಂಸ್ಥೆಗೆ ಸಿ ಎಸ್ ಆರ್ ವತಿಯಿಂದ ಸ್ವೀಕರಿಸಿದ ಉಪಕರಣ/ಇತರೆ ಸಾಮಗ್ರಿಗಳ ವಿವರವನ್ನು ಆರ್ಥಿಕ ಸಮಿತಿ ಸಭೆಯ ಅವಗಾಹನೆಗೆ ಮಂಡಿಸಿದೆ.**

| ಕ್ರಮ ಸಂಖ್ಯೆ | ಉಪಕರಣ/ಇತರೆ ಸಾಮಗ್ರಿಗಳ ವಿವರ | ಕಂಪನಿ | ಮೊತ್ತ |
|---|---|---|---|
| 1 | Oxygen Generation plant | M/S.United way of Bangalore/Confident group | 57,00,000/- |
| 2 | Haemodialysis Machine | HAL | 22,05,000/- |

2021-22ನೇ ಸಾಲಿನಲ್ಲಿ ಸಂಸ್ಥೆಗೆ ಸಿ ಎಸ್ ಆರ್ ವತಿಯಿಂದ ಸ್ವೀಕರಿಸಿದ ಉಪಕರಣ/ಇತರೆ ಸಾಮಗ್ರಿಗಳ ವಿವರವನ್ನು ಆರ್ಥಿಕ ಸಮಿತಿ ಸಭೆಯ ಅವಗಾಹನೆಗೆ ತರಲಾಗಿ, ಸಮ್ಮತಿಸಿದನ್ವಯ, ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಅನುಮೋದಿಸಿತು.

ಅಜೆಂಡಾ (ಏ) : 2022-23ನೇ ಸಾಲಿಗೆ ಲೆಕ್ಕಶೀರ್ಷಿಕೆ-2210-05-105-1-34-423 ಟಿ ಎಸ್ ಪಿ ಯೋಜನೆಯಡಿಯಲ್ಲಿ ಹಂಚಿಕೆಯಾಗಿರುವ ಅನುದಾನಕ್ಕೆ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಲಾಗಿ, ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ, ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

| ಕ್ರ. ಸಂ | ವಿವರಗಳು | 2021-22 ಕ್ಕೆ ಸರ್ಕಾರದಿಂದ ಹಂಚಿಕೆಯಾಗಿರುವ ಹಾಗೂ 2020-21ಕ್ಕೆ ಮುಕ್ತಾಯದ ಶುಲ್ಕ ಸೇರಿ ಅನುದಾನಕ್ಕೆ ಕ್ರಿಯಾಯೋಜನೆ (ರೂ.ಗಳಲ್ಲಿ) | ಒಟ್ಟು ವೆಚ್ಚಗಳು 2021-22 ರೂ.ಗಳಲ್ಲಿ | ಬಾಕಿ ಮೊತ್ತ ರೂ.ಗಳಲ್ಲಿ | 2022-23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗಳಲ್ಲಿ) | ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆ ರೂ.ಗಳಲ್ಲಿ | (2021-22 ರ ಮುಕ್ತಾಯದ ಶುಲ್ಕ ಸೇರಿ) ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|
| 01 | Free Treatment for Patients (Out Patients and In Patients) | 43.00 | 37.32 | 5.68 | 43.00 | 43.00 | 48.68 |

ಮೇಲೆ ವಿವರಿಸಿರುವಂತೆ, 2022-23ನೇ ಸಾಲಿಗೆ ಲೆಕ್ಕಶೀರ್ಷಿಕೆ-2210-05-105-1-34-423 ಟಿಎಸ್‌ಪಿ ಯೋಜನೆಯಡಿಯಲ್ಲಿ ಹಂಚಿಕೆಯಾಗಿರುವ ರೂ. 43 ಲಕ್ಷಗಳ ಕ್ರಿಯಾ ಯೋಜನೆಗೆ ಆರ್ಥಿಕ ಸಮಿತಿಯ ಅನುಮೋದನೆ ಕೋರಲಾಗಿ, ಅನುಮೋದಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಆಡಳಿತ ಮಂಡಳಿಯು ಅನುಮೋದನೆ ನೀಡಿತು.

ಅಜೆಂಡಾ (ಏ) : 2022-23ನೇ ಸಾಲಿಗೆ ಲೆಕ್ಕಶೀರ್ಷಿಕೆ-2210-05-105-1-34-423 ಎಸ್‌ಸಿಪಿ ಯೋಜನೆಯಡಿಯಲ್ಲಿ ಹಂಚಿಕೆಯಾಗಿರುವ ಅನುದಾನಕ್ಕೆ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿದೆ.

| ಕ್ರ.ಸಂ | ವಿವರಗಳು | 2021-22 ಕ್ಕೆ ಸರ್ಕಾರದಿಂದ ಹಂಚಿಕೆಯಾಗಿರುವ ಹಾಗೂ 2020-21ಕ್ಕೆ ಮುಕ್ತಾಯದ ಶುಲ್ಕ ಸೇರಿ ಅನುದಾನಕ್ಕೆ ಕ್ರಿಯಾಯೋಜನೆ (ರೂ.ಗಳಲ್ಲಿ) | ಒಟ್ಟು ವೆಚ್ಚಗಳು 2021-22 ರೂ.ಗಳಲ್ಲಿ | ಬಾಕಿ ಮೊತ್ತ ರೂ.ಗಳಲ್ಲಿ | 2022-23ನೇ ಸಾಲಿಗೆ ಆಯವ್ಯಯ ಸಲ್ಲಿಕೆ (ರೂ.ಗಳಲ್ಲಿ) | ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನಕ್ಕೆ ಕ್ರಿಯಾ ಯೋಜನೆ ರೂ.ಗಳಲ್ಲಿ | (2021-22 ರ ಮುಕ್ತಾಯದ ಶುಲ್ಕ ಸೇರಿ) ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|---|---|---|---|
| 01 | Free Treatment for Patients (Out Patients and In Patients) | 172.00 | 172.00 | 00 | 172.00 | 172.00 | 172.00 |

ಮೇಲೆ ವಿವರಿಸಿರುವಂತೆ 2022-23ನೇ ಸಾಲಿಗೆ ಲೆಕ್ಕಶೀರ್ಷಿಕೆ-2210-05-105-1-34-423 ಎಸ್‌ಸಿಪಿ ಯೋಜನೆಯಡಿಯಲ್ಲಿ ಹಂಚಿಕೆಯಾಗಿರುವ ರೂ. 172 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಲಾಗಿ, ಅನುಮೋದಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಅನುಮೋದಿಸಿತು.

**ಅಜೆಂಡಾ: (೬) : ಸಂಸ್ಥೆಗೆ ಅವಶ್ಯವಿರುವ ಅಸಿಸ್ಟೆಂಟ್ ಪ್ರೊಫೆಸರ್-ಪೀಡಿಯಾಟ್ರಿಕ್ ನೆಫ್ರೋಲಜಿ ಹುದ್ದೆಯನ್ನು ಸೃಜಿಸುವ ಬಗ್ಗೆ.**

Pediatric nephrology is a well-established discipline in many countries around the world. The Department of Paediatric Nephrology is well established in many of the academic institutions in our country. With the increasing burden of paediatric cases presenting to Institute of Nephrourology (INU) it is very essential to have the Department of paediatrics Nephrology which will help the institute to deliver much better care to the paediatric population of this region .

Pediatric nephrology helps in management of renal pathologies during childhood which is treated exclusively in academic and public health institutions. Pediatric nephrology focuses on renal growth and the best means to optimize the growth of children with chronic renal disease.

The use of hormones, reversal of acidosis, improvement in nutritional intake, intensified

dialysis, and predialytic transplantation have all been advocated to reverse growth failure.

The incidence of nephrolithiasis in children and adolescents in increasing and appears to double every 10 years. The most important role of the pediatric nephrologist is to diagnose and modify various metabolic and non- metabolic risk factors, as well as prevent long –term complications especially in the case of recurrent nephrolithiasis.

Pediatric nephrologists have an important role in the diagnostic work –up and prevention of recurring nephrolithiasis.

**ಹುದ್ದೆಯ ವಿವರ, ವೇತನ ಶ್ರೇಣಿ, ವಾರ್ಷಿಕ ಅಂದಾಜು ವೆಚ್ಚ ಇವುಗಳ ವಿವರ ಈ ಕೆಳಕಂಡಂತಿದೆ:**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸೃಜಿಸುವ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು | ಅಂದಾಜು ವಾರ್ಷಿಕ ವೆಚ್ಚ |
|---|---|---|---|---|---|
| 1 | ಅಸಿಸ್ಟೆಂಟ್ ಪ್ರೊಫೆಸರ್–ಪೀಡಿಯಾಟ್ರಿಕ್ ನೆಫ್ರೋಲಜಿ | 01 | 79800–211500 | 126684/- | 1520208/- |

ಸಂಸ್ಥೆಗೆ ಅವಶ್ಯವಿರುವ ಅಸಿಸ್ಟೆಂಟ್ ಪ್ರೊಫೆಸರ್–ಪೀಡಿಯಾಟ್ರಿಕ್ ನೆಫ್ರೋಲಜಿ ಹುದ್ದೆಯನ್ನು ಮೇಲ್ಕಂಡ ವೇತನ ಶ್ರೇಣಿಯಲ್ಲಿ ಸೃಜಿಸುವ ಬಗ್ಗೆ ಅನುಮೋದಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಲಾಗಿ, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಪೀಡಿಯಾಟ್ರಿಕ್ ನೆಫ್ರೋಲಜಿ ವಿಭಾಗವನ್ನು ಪ್ರಾರಂಭಿಸಿ, 01 ಅಸಿಸ್ಟೆಂಟ್ ಪ್ರೊಫೆಸರ್–ಪೀಡಿಯಾಟ್ರಿಕ್ ನೆಫ್ರೋಲಜಿ ಹುದ್ದೆಯನ್ನು ಮೇಲ್ಕಂಡ ವೇತನ ಶ್ರೇಣಿಯಲ್ಲಿ ಸೃಜಿಸಿ, ಸದರಿ ಹುದ್ದೆಯನ್ನು ನಿಯೋಜನೆ ಮೇರೆಗೆ ಭರ್ತಿ ಮಾಡದ ಷರತ್ತಿಗೆ ಒಳಪಟ್ಟು, ನೇರ ನೇಮಕಾತಿಯ ಮೂಲಕ ಭರ್ತಿ ಮಾಡುವಂತೆ ಸೂಚಿಸಿ ಅನುಮೋದಿಸಿತು.

**ಅಜೆಂಡಾ (ಓ) : ಸಂಸ್ಥೆಗೆ ಅವಶ್ಯಕವಿರುವ Assistant Professor-Interventional Nephrology ಹುದ್ದೆಯನ್ನು ಸೃಜಿಸುವ ಬಗ್ಗೆ ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.**

Intervention Nephrologist is upcoming subspeciality in Nephrology, Dialysis Access problems are enormous in Hemodialysis patient and their complications like central

vein stenosis. Nephrologist who trained in Intervention are better person to deal with these complication.

INU being primer institute which caters to whole state and other states also like AP/Telangana/ Orissa/ Tamilnadu / WB definitely needs intervention Nephrologist as it is getting more Acces related complications. In future INU has planned to start fellowship for Intervention Nephrologist course.

**ಹುದ್ದೆಯ ವಿವರ, ವೇತನ ಶ್ರೇಣಿ, ವಾರ್ಷಿಕ ಅಂದಾಜು ವೆಚ್ಚ ಇವುಗಳ ವಿವರ ಈ ಕೆಳಕಂಡಂತಿದೆ:**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸೃಜಿಸುವ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ | ಸರಾಸರಿ ಮಾಸಿಕ ವೇತನ ಮತ್ತು ಭತ್ಯೆಗಳು | ಅಂದಾಜು ವಾರ್ಷಿಕ ವೆಚ್ಚ |
|---|---|---|---|---|---|
| 1 | Assistant Professor-Interventional Nephrology | 01 | 79800–211500 | 126684/– | 1520208/– |

Assistant Professor-Interventional Nephrology ಹುದ್ದೆಯನ್ನು ಈ ಮೇಲ್ಕಂಡ ವೇತನ ಶ್ರೇಣಿಯಲ್ಲಿ ಸೃಜಿಸಿ ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಬೇಕೆಂದು ಕೋರಲಾಗಿ, ಹುದ್ದೆಯನ್ನು ಸೃಜಿಸುವ ಬಗ್ಗೆ ಅನುಮೋದಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಇಂಟರ್‌ವೆನ್ಷನಲ್ ನೆಫ್ರೋಲಜಿ ವಿಭಾಗವನ್ನು ಪ್ರಾರಂಭಿಸಿ, 01 ಅಸಿಸ್ಟೆಂಟ್ ಪ್ರೊಫೆಸರ್–ಇಂಟರ್‌ವೆನ್ಷನಲ್ ನೆಫ್ರೋಲಜಿ ಹುದ್ದೆಯನ್ನು ಮೇಲ್ಕಂಡ ವೇತನ ಶ್ರೇಣಿಯಲ್ಲಿ ಸೃಜಿಸಿ, ಸದರಿ ಹುದ್ದೆಯನ್ನು ನಿಯೋಜನೆ ಮೇರೆಗೆ ಭರ್ತಿ ಮಾಡದ ಷರತ್ತಿಗೆ ಒಳಪಟ್ಟು, ನೇರ ನೇಮಕಾತಿಯ ಮೂಲಕ ಭರ್ತಿ ಮಾಡುವಂತೆ ಸೂಚಿಸಿ ಅನುಮೋದಿಸಿತು.

**ಅಜೆಂಡಾ (ಐ) : ಸಂಸ್ಥೆಗೆ ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳ ಸಂಗ್ರಹಣೆಗೆ ಆಡಳಿತಾತ್ಮಕ ಅನುಮೋದನೆಗಾಗಿ ಶಿಫಾರಸ್ಸು ನೀಡುವ ಬಗ್ಗೆ ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಿದೆ.**

| SL. No. | Name | Qty | Amount |
|---|---|---|---|
| 1 | High end Ultrasound machine with probes which can be used intra operatively for laproscopic and Robotic surgeries | 01 | 70,00,000.00 |
| 2 | Cath Lab for Interventional Nephrology | 01 | 3,25,00,000.00 |
| 3 | Assisted reproduction Unit (IVF Lab) | 01 | 1,34,03,000.00 |
| 4 | Automated urine analyzer | 01 | 55,00,000.00 |
| 5 | Fluorescent microscope | 01 | 11,00,000.00 |
| 6 | Fourier Transform Infrared Spectrometer | 01 | 25,00,000.00 |
| 7 | Lab server with accessories | 01 | 5,00,000.00 |
| 8 | ESWL Machine | 01 | 5,00,00,000.00 |
| | TOTAL | | **112503000.00** |

ಸಂಸ್ಥೆಗೆ ಅವಶ್ಯವಿರುವ ಸದರಿ ವೈದ್ಯಕೀಯ ಉಪಕರಣಗಳನ್ನು ಸಂಗ್ರಹಿಸಲು ಆಡಳಿತಾತ್ಮಕ ಅನುಮೋದನೆಗಾಗಿ ಶಿಫಾರಸ್ಸು ನೀಡುವಂತೆ ಕೋರಲಾಗಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಲಾಗಿ, ಈ ಬಗ್ಗೆ ಚರ್ಚಿಸಿ, ಒಪ್ಪಿಗೆ ನೀಡಿತು.

**ಅಜೆಂಡಾ (ಅಂ): ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಗೋವಿಂದರಾಜನಗರ ವಾರ್ಡ್–126 ರಲ್ಲಿರುವ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಘಟಕವನ್ನು ನೆಫ್ರೋ-ಯುರಾಲಜಿ ಸಂಸ್ಥೆಯಿಂದ ನಿರ್ವಹಿಸುವ ಬಗ್ಗೆ ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ ಆಡಳಿತ ಮಂಡಳಿಯಲ್ಲಿ ಮಂಡಿಸಿದೆ.**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಗೋವಿಂದರಾಜನಗರ ವಾರ್ಡ್–126 ರಲ್ಲಿರುವ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಘಟಕವನ್ನು ನೆಫ್ರೋ-ಯುರಾಲಜಿ ಸಂಸ್ಥೆಯು ನಿರ್ವಹಿಸುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಇವರು ತಮ್ಮ ಪತ್ರದಲ್ಲಿ ತಿಳಿಸಿರುವ ಷರತ್ತುಗಳನ್ವಯ ಬಿಬಿಎಂಪಿ ವತಿಯಿಂದ ನೀಡಿರುವ ರೂ. 1 ಕೋಟಿ ಸಹಾಯಧನದಲ್ಲಿ ಸಿಬ್ಬಂದಿ ವೇತನವನ್ನು ಭರಿಸಲು ಹಾಗೂ ಸದರಿ ಘಟಕದ

ರೋಗಿಗಳಿಗೆ ವಿವಿಧ ಯೋಜನೆಗಳಲ್ಲಿ ಚಿಕಿತ್ಸೆ ನೀಡಿ ಅದರಿಂದ ಬರುವ User Charge ಮೊತ್ತವನ್ನು ಇತರೇ ಖರ್ಚು ವೆಚ್ಚಗಳಿಗೆ ಉಪಯೋಗಿಸಿಕೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಲಾಗಿ, ಅನುಮೋದಿಸಿ, ಆಡಳಿತ ಮಂಡಳಿಗೆ ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿ, ಅನುಮೋದಿಸಿತು.

**ಅಜೆಂಡಾ : (ಅಃ) : ಸಂಸ್ಥೆಯ 2021-2022 ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪಟ್ಟಿಯನ್ನು ಆಡಳಿತ ಮಂಡಳಿಯು ಅನುಮೋದಿಸಲು ಶಿಫಾರಸ್ಸು ನೀಡುವ ಬಗ್ಗೆ ಆರ್ಥಿಕ ಸಮಿತಿಯ ಶಿಫಾರಸ್ಸಿನೊಂದಿಗೆ ಆಡಳಿತ ಮಂಡಳಿಯಲ್ಲಿ ಮಂಡಿಸಿದೆ.**

2021-22ನೇ ಸಾಲಿನ ಲೆಕ್ಕಪತ್ರ ಪರಿಶೋಧನೆಗಾಗಿ ಸಂಸ್ಥೆಯ ಲೆಕ್ಕಪರಿಶೋಧಕರಾಗಿ ನೇಮಕ ಗೊಂಡಿರುವ ಶ್ರೀ.ನಾರಾಯಣ್ ಭಟ್ ಅಂಡ್ ಕಂಪನಿ. ಚಾರ್ಟೆಡ್ ಅಕೌಂಟೆಟ್ಸ್, ನಂ. 310, ಶ್ರೇಷ್ಠಭೂಮಿ, ಶಂಖರಪುರಂ ಬೆಂಗಳೂರು-560004. ಇವರು ಪರಿಶೋಧಿಸಲ್ಪಟ್ಟ ಸಂಸ್ಥೆಯ 2021-2022ನೇ ಸಾಲಿನ ಲೆಕ್ಕಪತ್ರಗಳ ಪಟ್ಟಿಗಳನ್ನು ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಆರ್ಥಿಕ ಸಮಿತಿಯು ಪರಿಶೀಲಿಸಿ ಆಡಳಿತ ಮಂಡಳಿಗೆ ಶಿಫಾರಸ್ಸು ನೀಡುವಂತೆ ಕೋರಲಾಗಿ, ಅನುಮೋದಿಸಿ, ಶಿಫಾರಸ್ಸು ನೀಡಿದನ್ವಯ, ಆಡಳಿತ ಮಂಡಳಿಯ ಅನಮೋದನೆ ಕೋರಿದೆ.

**ವಿಷಯ (4) : ಆಡಳಿತ ಮಂಡಳಿಯ ಅನುಮೋದನೆಗಾಗಿ ಪ್ರಸ್ತುತ ಮಂಡಿಸುತ್ತಿರುವ ಅಂಶಗಳು** :

ಅಂಶ (1) : **ನೆಫ್ರೋ-ಯುರಾಲಜಿ ಸಂಸ್ಥೆಯ ಮೈಸೂರು ಘಟಕದಲ್ಲಿ ಖಾಲಿ ಇರುವ ಸಹಾಯಕ ಆಡಳಿತಾಧಿಕಾರಿ ಹುದ್ದೆಗೆ ಶ್ರೀ. ಸಿ.ವಿ. ಮೋಹನ್, ಸಹಾಯಕ ಆಡಳಿತಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಹೆಚ್.ಡಿ. ಕೋಟೆ, ಮೈಸೂರು ಜಿಲ್ಲೆ ಇವರನ್ನು ನಿಯೋಜನೆ ಮೇರೆಗೆ ನೇಮಕ ಮಾಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.**

ನೆಫ್ರೋ-ಯುರಾಲಜಿ ಸಂಸ್ಥೆಯ ಮೈಸೂರು ಘಟಕದಲ್ಲಿ ಖಾಲಿ ಇರುವ ಸಹಾಯಕ ಆಡಳಿತಾಧಿಕಾರಿ ಹುದ್ದೆಗೆ ಶ್ರೀ. ಸಿ.ವಿ. ಮೋಹನ್, ಸಹಾಯಕ ಆಡಳಿತಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಹೆಚ್.ಡಿ. ಕೋಟೆ, ಮೈಸೂರು ಜಿಲ್ಲೆ ಇವರನ್ನು ನಿಯೋಜನೆ ಮೇರೆಗೆ ನೇಮಕ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 42 ಎಂಎಸ್ ಎಫ್ 2022 ದಿನಾಂಕ : 17.02.2022 ರಲ್ಲಿ ಸೂಚಿಸಿರುವ ಮೇರೆಗೆ, ಸಂಸ್ಥೆಯ ಬೈಲಾ ರೀತ್ಯ ಆಡಳಿತ ಮಂಡಳಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಕ್ರಮವಹಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ

ಕೋರಲಾಗಿ, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಶ್ರೀ. ಸಿ.ವಿ. ಮೋಹನ್, ಸಹಾಯಕ ಆಡಳಿತಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಹೆಚ್.ಡಿ. ಕೋಟೆ, ಮೈಸೂರು ಜಿಲ್ಲೆ ಇವರನ್ನು ಮೈಸೂರು ನೆಫ್ರೋ–ಯುರಾಲಜಿ ಘಟಕಕ್ಕೆ ನಿಯೋಜನೆ ಮಾಡಿದಲ್ಲಿ, ಸದರಿ ನೌಕರರು ಪ್ರಸಕ್ತ ಕರ್ತವ್ಯ ನಿರ್ವಹಿಸುತ್ತಿರುವ ಆಸ್ಪತ್ರೆಯಲ್ಲಿ ನೌಕರರ ಕೊರತೆ ಕಂಡು ಬರುವ ಪ್ರಯುಕ್ತ ಮೇಲ್ಕಂಡ ಪ್ರಸ್ತಾವನೆಯನ್ನು ನಿರಾಕರಿಸಲಾಯಿತು.

**ಅಂಶ (2) : ಶ್ರೀಮತಿ. ದ್ರಾಕ್ಷಾಯಿಣಿ.ಎಲ್., ಶುಶ್ರೂಷಕ ಅಧಿಕಾರಿ, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು ಇವರ ವರ್ಗಾವಣೆಗೆ ಸಂಬಂಧಿಸಿದಂತೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.**

ಶ್ರೀಮತಿ. ದ್ರಾಕ್ಷಾಯಿಣಿ.ಎಲ್., ಶುಶ್ರೂಷಕ ಅಧಿಕಾರಿ, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು ಇವರು ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇಲ್ಲಿ ಶುಶ್ರೂಷಕ ಅಧಿಕಾರಿಯಾಗಿ ಸರ್ಕಾರದ ಆದೇಶ ಸಂಖ್ಯೆ : ಎಂಇಡಿ 38 ಎಂಡಿಎಸ್ 2020 ದಿನಾಂಕ : 06.02.2020ರನ್ವಯ ಅನ್ಯ ಪರ ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಸದರಿ ಸಂಸ್ಥೆಗೆ ಖಾಯಂ ವರ್ಗಾವಣೆ ಕೋರಿ ಸರ್ಕಾರಕ್ಕೆ ಮಾನ್ಯ ವೈದ್ಯಕೀಯ ಶಿಕ್ಷಣ ಇಲಾಖೆಯ ಸಚಿವರ ಮೂಲಕ ಮನವಿ ಸಲ್ಲಿಸಿದ್ದು, ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 258 ಎಂ ಎಸ್ ಎಫ್ 2022 ದಿನಾಂಕ : 02.07.2022 ರಲ್ಲಿ ಸದರಿ ನೌಕರರ ಖಾಯಂ ವರ್ಗಾವಣೆಗೆ ಸಂಬಂಧಿಸಿದಂತೆ ಸಂಸ್ಥೆಯ ಬೈಲಾ ಪ್ರಕಾರ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ನಿರ್ದೇಶಿಸಲಾಗಿದೆ.

ತತ್ಸಂಬಂಧ ಶ್ರೀಮತಿ. ದ್ರಾಕ್ಷಾಯಿಣಿ.ಎಲ್., ಶುಶ್ರೂಷಕ ಅಧಿಕಾರಿ ಇವರು ದಿನಾಂಕ : 12.08.2014 ರಂದು ಖಾಯಂ ಪೂರ್ವ ಅವಧಿಯನ್ನು ಪೂರ್ಣಗೊಳಿಸಿದ್ದು, ಸಂಸ್ಥೆಯ ಬೈಲಾ ರೀತ್ಯ ಸದರಿ ನೌಕರರ ವರ್ಗಾವಣೆಗೆ ಸಂಸ್ಥೆಯ ಆಡಳಿತ ಮಂಡಳಿಯ ಅನುಮೋದನೆ ಅಗತ್ಯವಿದ್ದು, ಈ ಸಂಬಂಧ ಆಡಳಿತ ಮಂಡಳಿಯ ಅನುಮೋದನೆಗೆ ಮಂಡಿಸಲಾಗಿ, ಈ ರೀತಿಯ ವರ್ಗಾವಣೆಯಿಂದ ಸಂಬಂಧಪಟ್ಟ ಆಸ್ಪತ್ರೆಗಳಲ್ಲಿ ನೌಕರರ ಕೊರತೆ ಕಂಡು ಬಂದು ರೋಗಿಗಳಿಗೆ ತೊಂದರೆಯಾಗುವ ನಿಮಿತ್ತ, ಈ ರೀತಿಯ ಖಾಯಂ ವರ್ಗಾವಣೆಗಳಿಗೆ ಯಾವುದೇ ಸಿಬ್ಬಂದಿಗಳಿಗೂ ಅವಕಾಶ ನೀಡದಂತೆ ನಿರ್ಣಯಿಸಿ, ಸದರಿ ಶುಶ್ರೂಷಾಧಿಕಾರಿಯವರ ಅನ್ಯ ಪರ ಸೇವೆಯನ್ನು ಮಾರ್ಚ್ 2023ಕ್ಕೆ ಸೀಮಿತಗೊಳಿಸಿ, ಮಾತೃ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿ, ಮೇಲ್ಕಂಡ ಪ್ರಸ್ತಾವನೆಯನ್ನು ನಿರಾಕರಿಸಲಾಯಿತು.

ಅಂಶ(3) : **ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ|| ಕೇಶವಮೂರ್ತಿ.ಆರ್., ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಯುರಾಲಜಿ ವಿಭಾಗ ಹಾಗೂ ನಿರ್ದೇಶಕರು (ಪ್ರ) ಇವರ ವಿದೇಶ ಪ್ರಯಾಣದ ಆದೇಶಕ್ಕೆ ಆಡಳಿತ ಮಂಡಳಿಯು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಡಾ|| ಕೇಶವಮೂರ್ತಿ.ಆರ್., ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಯುರಾಲಜಿ ವಿಭಾಗ ಹಾಗೂ ನಿರ್ದೇಶಕರು (ಪ್ರ) ಇವರು ಭಾರತೀಯ ಯುರಾಲಜಿಕಲ್

ಅಸೋಸಿಯೇಷನ್ ನ ಗೌರವ ಕಾರ್ಯದರ್ಶಿಯಾಗಿರುವ ನಿಮಿತ್ತ, ದಿನಾಂಕ : 10.08.2022 ರಿಂದ 17.08.2022 ರವರೆಗೆ ಮಾರಿಷಷ್ ನಲ್ಲಿ ನಡೆಯಲಿರುವ ಇಂಡೋ–ಮಾರಿಷಷ್ ಯುರಾಲಜಿ ಸಮಾವೇಶ 2022 ರಲ್ಲಿ ಭಾಗವಹಿಸಿ ಉಪನ್ಯಾಸ ನೀಡಲು ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 259 ಎಂ ಎಸ್ ಎಫ್ 2022 ದಿನಾಂಕ : 28.07.2022 ರನ್ವಯ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಷರತ್ತಿಗೆ ಒಳಪಟ್ಟು ಪ್ರವಾಸ ಕೈಗೊಂಡಿದ್ದು, ಸದರಿ ಅನುಮತಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಲಾಗಿ, ಅನುಮೋದಿಸಿತು.

## ವಿಷಯ 5 : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ಅಂಶಗಳು :

**ಅಂಶ (1) : ನೆಫ್ರೋ–ಯುರಾಲಜಿ ಸಂಸ್ಥೆಯ ಮೈಸೂರು ಘಟಕಕ್ಕೆ ಜಮೀನು ಮಂಜೂರು ಮಾಡಿಕೊಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ.**

ದಿನಾಂಕ : 26.12.2019ರಂದು ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ ಕೆ.ಆರ್.ಆಸ್ಪತ್ರೆಯ ಪಿ.ಕೆ.ಟಿ.ಬಿ. ಸ್ಯಾನಿಟೋರಿಯಂ ಆಸ್ಪತ್ರೆಯ ಆವರಣದಲ್ಲಿರುವ ಭೂಮಿಯಲ್ಲಿ ಅವಶ್ಯವಿರುವ 05 ಎಕರೆ ಜಮೀನನ್ನು ನೆಫ್ರೋ–ಯುರಾಲಜಿ ಸಂಸ್ಥೆಯ ಮೈಸೂರು ಘಟಕಕ್ಕೆ ಹಸ್ತಾಂತರಿಸಲು ಅನುಮೋದನೆ ನೀಡಿ, ಈ ಬಗ್ಗೆ ಅಗತ್ಯ ಕ್ರಮವಹಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಗೆ ಸೂಚಿಸಿದ್ದ ಬಗ್ಗೆ ದಿನಾಂಕ : 24.01.2022 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ಗಮನಕ್ಕೆ ತರಲಾಗಿ, ಸಂಸ್ಥೆಯ ಬಳಕೆದಾರರ ಶುಲ್ಕ (User Charges) ಹಾಗೂ ಸರ್ಕಾರದ ಕೊಡುಗೆಯೊಂದಿಗೆ ಮೈಸೂರಿನಲ್ಲಿ ನೆಫ್ರೋ–ಯುರಾಲಜಿ ಘಟಕವನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಪರಿಶೀಲಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಸೂಚಿಸಲಾಗಿತ್ತು.

ಸರ್ಕಾರದ ಪತ್ರ ಸಂಖ್ಯೆ : ಎಂಇಡಿ 263 ಎಂ ಎಸ್ ಎಫ್ 2022 ದಿನಾಂಕ : 27.06.2022ರಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರೊಂದಿಗೆ ಚರ್ಚಿಸಿದಂತೆ, ಮೈಸೂರಿನ ಜಯದೇವ ಆಸ್ಪತ್ರೆಯ ಪಕ್ಕದಲ್ಲಿರುವ ಒಂದು ಎಕರೆ ಜಾಗವನ್ನು ಹಸ್ತಾಂತರಿಸಲು ನಿರ್ದೇಶಕರು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯವರು ಒಪ್ಪಿರುವುದಾಗಿ ತಿಳಿಸಿ, ಉದ್ದೇಶಿತ ಕಟ್ಟಡವು ಬರುವ ಜಾಗದ Site Plan ನ್ನು ಸಿದ್ಧಪಡಿಸಿಕೊಂಡು, ನಿರ್ದೇಶಕರು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇವರೊಂದಿಗೆ ಸಮಾಲೋಚಿಸಿ, ಜಮೀನು ಹಸ್ತಾಂತರ ಕುರಿತು ಮುಂದಿನ ಅಗತ್ಯ ಕ್ರಮವನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

ಪ್ರಸ್ತುತ ನೆಫ್ರೋ-ಯುರಾಲಜಿ ಮೈಸೂರು ಘಟಕಕ್ಕೆ ಮೈಸೂರಿನ ಸುತ್ತಮುತ್ತಲಿನ ಪ್ರದೇಶಗಳಿಂದ ಬರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಯನ್ನು ಮುಂಬರುವ ದಿನಗಳಲ್ಲಿ ವಿಸ್ತರಿಸುವ ಅಗತ್ಯವಿದ್ದು, ನೆಫ್ರೋ-ಯುರಾಲಜಿ ಘಟಕಕ್ಕೆ ಪ್ರತ್ಯೇಕ ಕಟ್ಟಡವನ್ನು ನಿರ್ಮಾಣ ಮಾಡಲು 05 ಎಕರೆ ಜಮೀನಿನ ಅವಶ್ಯಕತೆ ಇದೆ. ರೋಗಿಗಳ ಹಿತದೃಷ್ಟಿಯಿಂದ ಪ್ರಸ್ತುತ ಮಂಜೂರು ಮಾಡಿರುವ 01 ಎಕರೆ ಜಮೀನಿನ ಜೊತೆಗೆ ಅವಶ್ಯಕವಿರುವ ಉಳಿಕೆ 04 ಎಕರೆ ಜಮೀನನ್ನು ಮಂಜೂರು ಮಾಡಿದಲ್ಲಿ ರೋಗಿಗಳಿಗೆ ಉತ್ತಮ ರೀತಿಯ ಸೌಲಭ್ಯದೊಂದಿಗೆ ಅಗತ್ಯ ಚಿಕಿತ್ಸೆಯನ್ನು ನೀಡಲು ಅನುಕೂಲವಾಗುವುದರಿಂದ, ಪ್ರಸ್ತಾವನೆಯಲ್ಲಿ ಕೋರಿರುವಂತೆ 05 ಎಕರೆ ಜಮೀನನ್ನು ಮಂಜೂರು ಮಾಡಿಕೊಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಲಾಗಿ, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿಯೂ ಸಹ ನೆಫ್ರೋ-ಯುರಾಲಜಿ ಸ್ಪೆಷಾಲಿಟಿಗೆ ಸಂಬಂಧಿಸಿದಂತೆ ಪ್ರತ್ಯೇಕ ವಿಭಾಗವಿರುವುದರಿಂದ, ಈ ಸದ್ಯಕ್ಕೆ ಮೈಸೂರು ಜಯದೇವ ಆಸ್ಪತ್ರೆಯ ಪಕ್ಕದಲ್ಲಿರುವ 01 ಎಕರೆ ಜಾಗವನ್ನು ಮಂಜೂರು ಮಾಡಿರುವ ಬಗ್ಗೆ ಸರ್ಕಾರದ ಸೂಚನೆಯಂತೆ ಅಗತ್ಯ ಕ್ರಮವಹಿಸಲು ಆದೇಶಿಸಲಾಯಿತು.

ಅಂಶ (2) : ಸಂಸ್ಥೆಯ ಅನೆಕ್ಸ್ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ.

ನೆಫ್ರೋ-ಯುರಾಲಜಿ ಸಂಸ್ಥೆಯಲ್ಲಿ ದಿನೇ ದಿನೇ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ, ಅಧಿಕ ಸೌಲಭ್ಯದ ಅವಶ್ಯಕತೆ ಇರುವುದರಿಂದ, ಈಗಾಗಲೇ ನಿರ್ಮಾಣ ಹಂತದಲ್ಲಿರುವ ಅನೆಕ್ಸ್ ಕಟ್ಟಡ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಕಾರ್ಯಾರಂಭ ಮಾಡುವ ಬಗ್ಗೆ ಸಭೆಯಲ್ಲಿದ್ದ ಸರ್ವ ಸದಸ್ಯರು ಕೂಲಂಕಷವಾಗಿ ಚರ್ಚಿಸಲಾಗಿ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ ಇವರು ಈ ಬಗ್ಗೆ ವಿವರಿಸಿ, ಕಾಮಗಾರಿಯ ಗುತ್ತಿಗೆ ಮೊತ್ತವು ರೂ. 18,40,48,991/- ಆಗಿದ್ದು, ಪ್ರಸ್ತುತ ಅನೆಕ್ಸ್ ಕಟ್ಟಡ ಕಾಮಗಾರಿಗೆ ನಿಗದಿಯಾದ ಮೊತ್ತಕ್ಕಿಂತ ಶೇ. 60 ರಷ್ಟು ಬೆಲೆ ಏರಿಕೆ ಜಾಸ್ತಿ ಆಗಿದೆ. ಕಟ್ಟಡ ಕಾಮಗಾರಿ ಪೂರ್ಣಗೊಂಡಲ್ಲಿ ಅಂದಾಜು 150ರಷ್ಟು ಹಾಸಿಗೆ ಸಾಮರ್ಥ್ಯವು ಹೆಚ್ಚಾಗುವುದರಿಂದ, ಸಾರ್ವಜನಿಕರಿಗೆ ಹಾಗೂ ರೋಗಿಗಳಿಗೆ ಉಪಯುಕ್ತವಾಗುವ ಹಿನ್ನೆಲೆಯಲ್ಲಿ ಕಟ್ಟಡ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂಬುದಾಗಿ ವಿವರಿಸಿದರು. ಈ ಸಂಬಂಧ ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರು ಅನೆಕ್ಸ್ ಕಟ್ಟಡ ಕಾಮಗಾರಿಗೆ ಸಂಬಂಧಿಸಿದಂತೆ ಪರಿವೀಕ್ಷಣಾ ವರದಿಯನ್ನು ಸಿದ್ಧಪಡಿಸಿ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರೊಂದಿಗೆ ಚರ್ಚಿಸಿ, ಸಚಿವ ಸಂಪುಟದಲ್ಲಿ ಮಂಡಿಸಲು ಅಗತ್ಯ ಕ್ರಮವಹಿಸುವಂತೆ ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇವರಿಗೆ ಸೂಚಿಸಲಾಯಿತು.

**ಅಂಶ (3) : ಸಂಸ್ಥೆಗೆ ಗುಂಜೂರಿನಲ್ಲಿ ಹಂಚಿಕೆಯಾಗಿರುವ ಜಾಗದ ಬಗ್ಗೆ.**

ನೆಫ್ರೋ-ಯುರಾಲಜಿ ಸಂಸ್ಥೆಗೆ, ಗುಂಜೂರು ಗ್ರಾಮದಲ್ಲಿ ಹಂಚಿಕೆಯಾಗಿದ್ದ 15 ಎಕರೆ ಜಾಗದಲ್ಲಿ ಸರ್ಕಾರದ ಆದೇಶದಂತೆ 09 ಎಕರೆ ಜಾಗವನ್ನು ವಶಕ್ಕೆ ಪಡೆದಿದ್ದು, ಸದರಿ ಜಾಗವು ಬೆಂಗಳೂರು ನಗರದಿಂದ ಸಾಕಷ್ಟು ದೂರವಿರುವುದರಿಂದ, ಸದರಿ ಜಾಗದಲ್ಲಿ ಆಸ್ಪತ್ರೆಯನ್ನು ನಿರ್ಮಾಣ ಮಾಡಿದಲ್ಲಿ ಬೆಂಗಳೂರು ಹೊರತುಪಡಿಸಿ ಇತರೆ ಜಿಲ್ಲೆಗಳಿಂದ ಬರುವ ಅಧಿಕ ಸಂಖ್ಯೆಯ ರೋಗಿಗಳಿಗೆ ಅನಾನುಕೂಲವಾಗುತ್ತದೆ. ಅಲ್ಲದೇ, ನೆಫ್ರೋಲಜಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ನೆಫ್ರೋಲಜಿ ಜೊತೆಗೆ ಇತರೆ ವಿಭಾಗಗಳ ಚಿಕಿತ್ಸೆಯು ಅವಶ್ಯಕವಾಗಿರುವುದರಿಂದ, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ಹಾಗೂ ಸಂಸ್ಥೆಯ ಅಭಿವೃದ್ಧಿಯ ದೃಷ್ಟಿಯಿಂದ ಬೆಂಗಳೂರು ಕೇಂದ್ರ ಸ್ಥಳದಲ್ಲಿಯೇ ಸರಿಸುಮಾರು 500 ಹಾಸಿಗೆ ಸಾಮರ್ಥ್ಯದ ಕಟ್ಟಡವನ್ನು ನಿರ್ಮಾಣಮಾಡಲು ಅಗತ್ಯವಿರುವ ಜಾಗವನ್ನು ಗುರುತಿಸಿ, ಸಂಸ್ಥೆಗೆ ಹಸ್ತಾಂತರಿಸುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ನಿರ್ಣಯಿಸಿದರು.

**ಅಂಶ (4) : ಡಾ॥ ಲೀಲಾವತಿ.ವಿ., ಸಹಾಯಕ ಪ್ರಾಧ್ಯಾಪಕರು, ನೆಫ್ರೋಲಜಿ ವಿಭಾಗ ಇವರನ್ನು ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿಗೆ ನಿಯೋಜನೆ ಮೇರೆಗೆ ಸೇವೆಗೆ ಸೇರಿದ ದಿನಾಂಕದಿಂದಲೇ ಸಂಸ್ಥೆಯಲ್ಲಿ ವಿಲೀನಗೊಳಿಸುವಂತೆ ಕೋರಿ.**

ಡಾ॥ ಲೀಲಾವತಿ.ವಿ, ಸಹ ಪ್ರಾಧ್ಯಾಪಕರು, ನೆಫ್ರೋಲಜಿ ವಿಭಾಗ, ಬೆಂಗಳೂರು 2012ನೇ ಸಾಲಿನಲ್ಲಿ ಡಿ.ಎಂ ನೆಫ್ರಾಲಜಿ ವಿದ್ಯಾರ್ಹತೆಯನ್ನು ಹೊಂದಿದ್ದು, ಈ ವಿದ್ಯಾರ್ಹತೆಯನ್ನು ಹೊಂದಿರುವ ಹಿನ್ನೆಲೆಯಲ್ಲಿ ದಿನಾಂಕ:12.09.2013ರಲ್ಲಿ ಸದರಿಯವರನ್ನು ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂದ ನಿಯೋಜನೆ ಮೇರೆಗೆ ನೇಮಿಸಲಾಗಿರುತ್ತದೆ. ನಂತರ ದಿನಾಂಕ:11.09.2014ರಲ್ಲಿ ಸದರಿಯವರ ನಿಯೋಜನೆಯನ್ನು 04 ವರ್ಷದ ಅವಧಿಗೆ ಮುಂದುವರೆಸಲಾಗಿರುತ್ತದೆ.

ಡಾ. ಶ್ರೀಧರ್ ಸಿ.ಜಿ ಇವರು 2013ನೇ ಸಾಲಿನಲ್ಲಿ ಡಿ.ಎಂ ನೆಫ್ರಾಲಜಿ ವಿದ್ಯಾರ್ಹತೆಯನ್ನು ಪಡೆದಿರುತ್ತಾರೆ. ನಂತರ ಸದರಿಯವರು ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 514 ಹೆಚ್‌ಎಸ್‌ಹೆಚ್ 2014, ದಿನಾಂಕ:25.09.2014ರಲ್ಲಿ 05 ವರ್ಷಗಳ ಅವಧಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂದ ನಿಯೋಜನೆಯ ಮೇರೆಗೆ ನೆಫ್ರೋ–ಯುರಾಲಜಿ ಸಂಸ್ಥೆಗೆ ನೇಮಕ ಮಾಡಲಾಗಿರುತ್ತದೆ.

ಡಾ. ವಿ. ಲೀಲಾವತಿ ಹಾಗೂ ಡಾ. ಶ್ರೀಧರ್ ಸಿ.ಜಿ ಇಬ್ಬರು ದಿನಾಂಕ:25.01.2015ರಂದು ಮನವಿ ಸಲ್ಲಿಸಿ ನೆಫ್ರೋ–ಯುರಾಲಜಿ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಖಾಯಂ ಆಗಿ ವಿಲೀನಗೊಳಿಸುವಂತೆ ಕೋರಿರುತ್ತಾರೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ:ಆಕುಕ 50 ಎಂಎಸ್‌ಎಫ್ 2017, ದಿನಾಂಕ:08.02.2018ರ ಆದೇಶದಲ್ಲಿ ಇಬ್ಬರನ್ನು ಖಾಯಂ ಆಗಿ ವಿಲೀನಗೊಳಿಸಿ ಡಾ. ಶ್ರೀಧರ್ ಸಿ.ಜಿ ಇವರನ್ನು ಸೇವಾ ಜೇಷ್ಠತೆಯಲ್ಲಿ ಹಿರಿಯವರನ್ನಾಗಿ ಡಾ. ವಿ. ಲೀಲಾವತಿ ಇವರನ್ನು ಕಿರಿಯವರನ್ನಾಗಿ ನಿಗದಿಪಡಿಸಲಾಗಿರುತ್ತದೆ.

ಡಾ. ಶ್ರೀಧರ್ ಸಿ.ಜಿ ಇವರಿಗಿಂತಲೂ ಮೊದಲೇ ಡಾ. ವಿ. ಲೀಲಾವತಿ ಇವರು ನೆಫ್ರೋ–ಯುರಾಲಜಿ ಸಂಸ್ಥೆಯ ಸಹ ಪ್ರಾಧ್ಯಾಪಕರ ಹುದ್ದೆಗೆ ಅಗತ್ಯವಿರುವ ಸೂಪರ್ ಸ್ಪೆಷಾಲಿಟಿ (ಡಿ.ಎಂ ನೆಫ್ರಾಲಜಿ) ವಿದ್ಯಾರ್ಹತೆಯನ್ನು ಹೊಂದಿ, ಡಾ. ಶ್ರೀಧರ್ ಸಿ.ಜಿ ಇವರಿಗಿಂತಲೂ ಮೊದಲೇ ನೆಫ್ರೋ–ಯುರಾಲಜಿ ಸಂಸ್ಥೆಯಲ್ಲಿ ನಿಯೋಜನೆ ಮೇರೆಗೆ ಸೇವೆ ಸಲ್ಲಿಸಿರುವುದರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸೇವಾ ಜೇಷ್ಠತೆಯನ್ನು ಪರಿಗಣಿಸದೆ, ಡಾ. ಶ್ರೀಧರ್ ಸಿ.ಜಿ ಇವರಿಗಿಂತಲೂ ಮೊದಲೇ ವಿದ್ಯಾರ್ಹತೆಯನ್ನು ಹೊಂದಿ, ನಿಯೋಜನೆ ಮೇರೆಗೆ ನೇಮಕಗೊಂಡಿರುವುದನ್ನು ಪರಿಗಣಿಸಿ ಡಾ. ವಿ. ಲೀಲಾವತಿ ಇವರನ್ನು ಸೇವಾ ಜೇಷ್ಠತೆಯಲ್ಲಿ ಹಿರಿಯರನ್ನಾಗಿ ಡಾ. ಶ್ರೀಧರ್ ಸಿ.ಜಿ ಇವರನ್ನು ಕಿರಿಯವರನ್ನಾಗಿ ಪರಿಗಣಿಸಲು ತೀರ್ಮಾನಿಸಲಾಯಿತು.

**ಅಂಶ (5) : ಸಂಸ್ಥೆಯ ನಿರ್ದೇಶಕರ ಹುದ್ದೆಯನ್ನು ಖಾಯಂ ಆಗಿ ನೇಮಕಾತಿ ಮಾಡುವ ಬಗ್ಗೆ**

ನೆಫ್ರೋ-ಯುರಾಲಜಿ ಸಂಸ್ಥೆಯ ನಿರ್ದೇಶಕರ ಹುದ್ದೆಯು 2013 ರಿಂದ ಈವರೆವಿಗೂ ಪ್ರಭಾರದಲ್ಲಿಯೇ ನಿರ್ವಹಿಸಲ್ಪಡುತ್ತಿದ್ದು, ಸಂಸ್ಥೆಯ ಆಡಳಿತಾತ್ಮಕ ದೃಷ್ಟಿಯಿಂದ ನಿರ್ದೇಶಕರ ಹುದ್ದೆಯನ್ನು ಖಾಯಂ ಆಗಿ ನೇಮಕಾತಿ ಮಾಡುವಂತೆ ಆಡಳಿತ ಮಂಡಳಿಯ ಸರ್ವ ಸದಸ್ಯರು, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ಮನವರಿಕೆ ಮಾಡಲಾಗಿ, ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಸಂಬಂಧಿಸಿದಂತೆ ಶೀಘ್ರವಾಗಿ ಇತ್ಯರ್ಥಪಡಿಸಲು ಅಗತ್ಯ ಕ್ರಮ ವಹಿಸುವಂತೆ ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರಿಗೆ ಸೂಚಿಸಲಾಯಿತು.

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷ ಪೀಠಕ್ಕೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಬಸವರಾಜ ಎಸ್ ಬೊಮ್ಮಾಯಿ)
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ,
ನೆಫ್ರೋ-ಯುರಾಲಜಿ ಸಂಸ್ಥೆ ಬೆಂಗಳೂರು.

(ಡಾ॥ ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ
ಮತ್ತು ಉಪಾಧ್ಯಕ್ಷರು, ಆಡಳಿತ ಮಂಡಳಿ,
ನೆಫ್ರೋ-ಯುರಾಲಜಿ ಸಂಸ್ಥೆ ಬೆಂಗಳೂರು.

(ನವೀನ್ ರಾಜ್ ಸಿಂಗ್)
ಸರ್ಕಾರದ ಕಾರ್ಯದರ್ಶಿಗಳು
ವೈದ್ಯಕೀಯ ಶಿಕ್ಷಣ ಇಲಾಖೆ



Generated from eOffice by DR K SUDHAKAR MED-MIN(SK) MINISTER MEDICAL EDUCATION SEC on 02/09/2022 08:17 PM